# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ಓಖಿ ಚಂಡಮಾರುತದಿಂದ ನೆರೆಪರಿಸ್ಥಿತಿಯುಂಟಾದ ಕನ್ಯಾಕುಮಾರಿಯಲ್ಲಿ ಆರೆಸ್ಸೆಸ್ ಸ್ವಯಂಸೇವಕರು ನೆರವಿಗೆ ಧಾವಿಸಿದರು. ಸಂತ್ರಸ್ತರಿಗೆ ದೋಣಿಗಳಲ್ಲಿ ಆಹಾರ ಮತ್ತಿತರ ದಿನೋಪಯೋಗಿ ಸಾಮಗ್ರಿಗಳನ್ನು ದೋಣಿಗಳಲ್ಲಿ ಕೊಂಡೊಯ್ದು ನೀಡಿದರು.


ಸಂಪುಟ : 39 ಸಂಚಿಕೆ : 9 ಹೇಮಲಂಬಿ–ಪುಷ್ಯ ಕಲಿಯುಗಾಬ್ದ 5119 15–12–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಲವ್ ಜಿಹಾದ್: ಇನ್ನಷ್ಟು ಅಖಿಲೆಯರು ಹಾದಿಯಾ ಆಗದಿರಲಿ

ಲವ್ ಜಿಹಾದ್ ವಿಷಯದಲ್ಲಿ ಕೇರಳ ಮತ್ತೆ ಸುದ್ದಿ ಮಾಡಿದೆ. ಹಾದಿಯಾ ಆಗಿ ಇಸ್ಲಾಮಿಗೆ ಮತಾಂತರಗೊಂಡ ಅಖಿಲಾ ಎಂಬ ಹಿಂದು ಹುಡುಗಿ ಸುದ್ದಿಯ ಕೇಂದ್ರ ಬಿಂದು. ಈ ಇಡೀ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಗಮನಿಸಿದ ಕೆಲವು ಪ್ರಮುಖ ಅಂಶಗಳು ಇದೊಂದು ಸಂಚು ಎನ್ನುವುದನ್ನು ಸಾರಿ ಹೇಳುತ್ತಿವೆ. ಒಟ್ಟು ಪ್ರಕರಣದ ಪ್ರಮುಖ ಅಂಶಗಳು ಹೀಗಿವೆ.

- ಕೇರಳದ ಕೊಟ್ಟಾಯಂನ ಮಾಜಿ ಯೋಧ ಅಖಿಲ್ ಅಶೋಕನ್ ಅವರ ಒಬ್ಬಳೇ ಮಗಳು ಅಖಿಲಾ 2015 ರಲ್ಲಿ ಬಿಹೆಚ್ಎಂಎಸ್ (ಹೋಮಿಯೋಪತಿ ವೈದ್ಯಕೀಯ ಶಿಕ್ಷಣ) ಮಾಡಲು ತಮಿಳುನಾಡಿನ ಸೇಲಂಗೆ ಹೋಗಿದ್ದಳು.
- ಮೊದಲು ಕಾಲೇಜು ಹಾಸ್ಟೆಲ್‌ನಲ್ಲಿದ್ದರೂ ಸ್ವಲ್ಪ ಸಮಯದ ಬಳಿಕ ಆಕೆ, ಫಸೀನಾ ಮತ್ತು ಜಸೀನಾ (ಸಹೋದರಿಯರು) ಎಂಬ ಇಬ್ಬರು ಮುಸ್ಲಿಂ ಹುಡುಗಿಯರು ಮತ್ತು ಬೇರೆ ಇಬ್ಬರು ಹಿಂದು ಹುಡುಗಿಯರ ಜೊತೆ ಒಂದು ಬಾಡಿಗೆ ಮನೆಯಲ್ಲಿ ವಾಸ ಮಾಡಲು ಪ್ರಾರಂಭಿಸಿದಳು.
- ಕ್ರಮೇಣ, ಜಸೀನಾ ಜೊತೆ ಹೆಚ್ಚು ಆತ್ಮೀಯತೆ ಬೆಳೆದು ಅವರ ಮನೆಗೆ ಅನೇಕ ಬಾರಿ ಹೋಗಿ ಅಲ್ಲಿ ಉಳಿದಿದ್ದಳು. ಜಸೀನಾ, ಫಸೀನಾ ಮತ್ತು ಅವರ ತಂದೆ ಅಬೂಬಕ್ಕರ್ ಇಸ್ಲಾಮಿಗೆ ಮತಾಂತರ ಆಗುವಂತೆ ಅಖಿಲಾಳ ಮನವೊಲಿಸುತ್ತಿದ್ದರು.
- ಒಂದು ದಿನ ಆಕೆ ಕಾಲೇಜಿಗೆ ಹಿಜಾಬ್ ಧರಿಸಿ ಬಂದಿದ್ದು ಆಕೆಯ ಸ್ನೇಹಿತೆಯರ ಮೂಲಕ ತಂದೆ ಅಶೋಕನ್ ಅವರಿಗೆ ಗೊತ್ತಾಗುತ್ತದೆ. ಜನವರಿ 2016ರಲ್ಲಿ ಅಖಿಲಾ ಸೇಲಂನಿಂದ ಕಾಣೆಯಾಗುತ್ತಾಳೆ. ಮಗಳು ಕಾಣೆಯಾದ ಬಗ್ಗೆ ತಂದೆ ಅಶೋಕನ್ ಅವರು ಅಬೂಬಕರ್, ಜಸೀನಾ ಮತ್ತು ಫಸೀನಾ ಸೇರಿ ತನ್ನ ಮಗಳನ್ನು ಅಪಹರಿಸಿದ್ದಾರೆಂದು ದೂರು ಸಲ್ಲಿಸುತ್ತಾರೆ.



- ಜನವರಿ 19 ರಂದು ಅಖಿಲಾ ಕೋರ್ಟಿನ ವಿಚಾರಣೆಗೆ ಹಾಜರಾಗಿ, ಅಫಿಡವಿಟ್ ಸಲ್ಲಿಸುತ್ತಾಳೆ. ಜಸೀನಾ ಮತ್ತು ಫಸೀನಾರ 'ಒಳ್ಳೆಯ ನಡತೆ ಮತ್ತು ಸಮಯಕ್ಕೆ ಸರಿಯಾಗಿ ಪ್ರಾರ್ಥನೆ ಮಾಡುವ' ಶಿಸ್ತನ್ನು ನೋಡಿ ತನಗೆ ಇಸ್ಲಾಂ ಮೆಚ್ಚುಗೆಯಾದದ್ದು, ಹಿಂದುಗಳ ಹಲವು ದೇವರ ಬದಲು ಒಬ್ಬ ದೇವರ ಕಲ್ಪನೆ ಇಷ್ಟವಾದದ್ದು, ಇಂಟರ್‌ನೆಟ್‌ನಲ್ಲಿ ವಿಡಿಯೋ ನೋಡಿ ಮತ್ತು ಪುಸ್ತಕಗಳನ್ನು ಓದಿ ಇಸ್ಲಾಮಿನ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದು, ಮನೆಯಲ್ಲಿರುವಾಗ ಒಮ್ಮೆ ತಾನು ಮುಸ್ಲಿಮರಂತೆ ಪ್ರಾರ್ಥನೆ ಮಾಡುವುದನ್ನು ನೋಡಿದ ತಂದೆ ಆಕ್ಷೇಪಿಸಿದ್ದು, ತನ್ನ ಅಜ್ಜ ತೀರಿದಾಗ ಹಿಂದು ಪದ್ಧತಿಯ ಪ್ರಕಾರ ಕೆಲವು ಆಚರಣೆಗಳನ್ನು ಮಾಡುವಂತೆ ತನಗೆ ಮನೆಯವರು ಒತ್ತಾಯಿಸಿದ್ದು ತನಗೆ ಇಷ್ಟವಾಗದಿದ್ದುದು ಎಲ್ಲವನ್ನೂ ಅಫಿಡವಿಟ್‌ನಲ್ಲಿ ವಿವರಿಸಿದ್ದಳು.
- ಇದರಿಂದ ಬೇಸರವಾಗಿ ತಾನೇ ಸ್ವತಃ ಮನೆಯಿಂದ ಹೊರಬಂದು ಸೇಲಂನ ಕಾಲೇಜಿಗೆ ಹೋಗದೇ, ಅಬೂಬಕರ್ ಮನೆಗೆ ಹೋಗಿದ್ದಾಗಿಯೂ ಬಳಿಕ ಸತ್ಯಸಾರಿಣಿ ಎಂಬ ಸಂಸ್ಥೆಯಲ್ಲಿ ಇಸ್ಲಾಂ ಅಧ್ಯಯನಕ್ಕೆ ತನಗೆ ವ್ಯವಸ್ಥೆ ಮಾಡಿದ್ದಾಗಿಯೂ, ಯಾರ ಒತ್ತಾಯ ಆಮಿಷಗಳಿಲ್ಲದೇ ತಾನೇ ಇಸ್ಲಾಮಿಗೆ ಮತಾಂತರ ಆಗಿದ್ದಾಗಿಯೂ ಅಫಿಡವಿಟ್‌ನಲ್ಲಿ ಆಕೆ ತಿಳಿಸುತ್ತಾಳೆ.
- ಸತ್ಯಸಾರಿಣಿ ಸಂಸ್ಥೆಯು ಪಿಎಫ್ಐ ಕಾರ್ಯಕರ್ತೆಯಾದ ಸೈನಬಾ ಎಂಬಾಕೆಯ ಜೊತೆ ಇರಲು ವ್ಯವಸ್ಥೆ ಮಾಡಿ, ಇಸ್ಲಾಂ ಅಧ್ಯಯನಕ್ಕೆ ವ್ಯವಸ್ಥೆ ಮಾಡುತ್ತದೆ.
- ಸ್ವತಃ ತಾನೇ ಬಯಸಿ ಇಸ್ಲಾಂ ಅಧ್ಯಯನ ಮಾಡುತ್ತಿರು–ವುದರಿಂದ ಮತ್ತು ಆಕೆ 18 ವರ್ಷ ಪ್ರಾಯ ದಾಟಿರುವುದರಿಂದ ಹೆಬಿಯಸ್ ಕಾರ್ಪಸ್ ಅರ್ಜಿಯನ್ನು ಕೋರ್ಟು ವಜಾ ಮಾಡಿ ಆಕೆಯ ಇಚ್ಛೆಯಂತೆ ಇಸ್ಲಾಂ ಕಲಿಯಲು ಅವಕಾಶ ನೀಡುತ್ತದೆ.

3ನೇ ಪುಟಕ್ಕೆ...

## ನಾವೇನು ಮಾಡಬಹುದು?

ಕೇರಳದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಇಂತಹ ಒಂದು ದೊಡ್ಡ ಜಾಲವೇ ಕಾರ್ಯಾಚರಿಸುತ್ತಿದ್ದು ಪ್ರೀತಿಯ ನಾಟಕವಾಡಿ ಹಿಂದು ಹೆಣ್ಣು ಮಕ್ಕಳನ್ನು ತಮ್ಮ ಬಲೆಗೆ ಬೀಳಿಸಿಕೊಳ್ಳುವ ಪ್ರಯತ್ನಗಳು ಮುಸ್ಲಿಂ ಹುಡುಗರಿಂದ ನಡೆಯುತ್ತಲೇ ಇವೆ. ಹಿಂದು ಪೋಷಕರು ಎಚ್ಚರಗೊಳ್ಳದ ಹೊರತು ಇದಕ್ಕೆ ತಡೆ ಹಾಕುವುದು ಕಷ್ಟ ಸಾಧ್ಯ. ನಮ್ಮ ಮನೆಯ ಮಕ್ಕಳು ಲವ್ ಜಿಹಾದ್‌ಗೆ ಬಲಿಯಾಗದಂತೆ ತಡೆಯಲು ನಾವೇನು ಮಾಡಬಹುದೆಂಬ ಬಗ್ಗೆ ಕೆಲವು ಅಂಶಗಳು ಇಲ್ಲಿವೆ.

- ನಮ್ಮ ಮಕ್ಕಳ ಸ್ನೇಹಿತರು ಯಾರು ಎಂಬ ಬಗ್ಗೆ ನಮಗೂ ತಿಳಿದಿರಲಿ. ಅವರ ಹಿನ್ನೆಲೆ, ಅವರ ಮತ ಯಾವುದೆಂಬ ಬಗ್ಗೆ ತಿಳಿಯುವುದೂ ಮುಖ್ಯ.
- ನಮ್ಮ ಮಕ್ಕಳು ಓದುವ ಕಾಲೇಜಿಗೆ ಅಥವಾ ಶಾಲೆಗೆ ಪಾಲಕರು ಆಗಾಗ ಹೋಗಿ ತಮ್ಮ ಮಕ್ಕಳ ಬಗ್ಗೆ ವಿಚಾರಿಸುವುದು, ಮಕ್ಕಳ ಸ್ನೇಹಿತರನ್ನೂ ಭೇಟಿ ಮಾಡುವುದೂ ಕೂಡ ಅಗತ್ಯ. ಏನಾದರೂ ಅನಪೇಕ್ಷಿತ ಬೆಳವಣಿಗೆಗಳು ನಡೆಯುತ್ತಿದ್ದರೆ, ಅವರ ಮೂಲಕ ನಮ್ಮ ಗಮನಕ್ಕೆ ಬರುವ ಸಾಧ್ಯತೆಗಳು ಜಾಸ್ತಿ.
- ಓದಿಗಿಂತ ವಾಟ್ಸಾಪ್, ಫೇಸ್‌ಬುಕ್‌ಗಳಿಗೇ ನಮ್ಮ ಮಕ್ಕಳು ಹೆಚ್ಚು ಸಮಯ ಕೊಡುತ್ತಿದ್ದಲ್ಲಿ ಸ್ವಲ್ಪ ಗಮನ ಕೊಡಬೇಕಾದ್ದು ಅಗತ್ಯ.
- ತಡವಾಗಿ ಬರುವುದು, ಸ್ನೇಹಿತರ ಮನೆಗೆ ಹೋಗುವುದು, ಕಂಬೈನ್ಡ್ ಸ್ಟಡಿ ಮಾಡುವುದು ಇವೆಲ್ಲದರ ಬಗ್ಗೆ ನಮಗೆ ಸರಿಯಾದ ಮಾಹಿತಿ ಇದೆಯೇ ಎಂಬುದನ್ನು ಪಾಲಕರು ಆಗಾಗ ಖಾತ್ರಿಪಡಿಸಿಕೊಳ್ಳುತ್ತಿರುವುದು ಒಳ್ಳೆಯದು.
- ಕೋಣೆಯಲ್ಲಿ ಒಬ್ಬರೇ ಕುಳಿತು ಓದುವ ನೆಪದಲ್ಲಿ ಫೋನಿನಲ್ಲಿ ಚಾಟ್ ಮಾಡುವ ಹದಿಹರೆಯದ ಮಕ್ಕಳು ಹಲವರು. ಲವ್ ಜಿಹಾದಿನ ಪ್ರೀತಿಯ ಬಲೆಗೆ ಬೀಳಿಸುವಲ್ಲಿ ಫೋನ್ ಬಹಳ ಪ್ರಮುಖ ಸಾಧನ ಎಂಬುದು ನಮಗೆ ನೆನಪಿರಲಿ.
- ನಮ್ಮ ಮನೆಯ ಹೆಣ್ಣು ಮಕ್ಕಳಿಗೆ ಯಾರಾದರೂ ಅನ್ಯಮತೀಯರು ವಿಶೇಷ ಸಹಾಯ ಮಾಡುತ್ತಿದ್ದರೆ, ಕಾಲೇಜಿನಲ್ಲೋ ಕಚೇರಿಯಲ್ಲೋ ಬಹಳ ಕಾಳಜಿ ತೋರಿಸುತ್ತಿದ್ದರೆ, ಅದರ ಬಗ್ಗೆ ಜಾಗೃತರಾಗಿರಬೇಕು ಅಥವಾ ಅಂತಹದ್ದನ್ನು ನಿರಾಕರಿಸುವುದೇ ಒಳ್ಳೆಯದು.
- ತಮ್ಮ ಮಕ್ಕಳ ಕೈಯಲ್ಲಿ ಹೊಸ ಹೊಸ ಗಿಫ್ಟ್‌ಗಳು ಬರುತ್ತಿವೆಯೆಂದರೆ, ಅದನ್ನು ನಿಜವಾಗಿ ಕೊಡುತ್ತಿರುವವರು ಯಾರು ಎನ್ನುವುದರ ಬಗ್ಗೆ ನಿಮಗೆ ಸರಿಯಾದ ತಿಳುವಳಿಕೆಯಿರಲಿ.
- ನಮ್ಮ ಕಾರಿನ ಡ್ರೈವರ್‌ನಿಂದ ಹಿಡಿದು, ಸಾಮಾನು ಕೊಳ್ಳುವ ಅಂಗಡಿಯವರು, ಮೊಬೈಲ್ ರಿಚಾರ್ಜ್ ಮಾಡಿಸುವ, ಸ್ಕೂಟರ್ ರಿಪೇರಿ ಮಾಡುವ, ತರಕಾರಿ, ಚಪ್ಪಲಿ, ಬ್ಯಾಗು, ಬಟ್ಟೆ, ಪರಫ್ಯೂಮ್ ಕೊಳ್ಳುವ ಅಂಗಡಿಯವರೆಗೆ ಎಲ್ಲರ ಬಗ್ಗೆಯೂ ನಮಗೆ ಸ್ವಲ್ಪ ತಿಳುವಳಿಕೆಯಿರಬೇಕಾದ್ದು ಬಹಳ ಮುಖ್ಯ.
- ಅನ್ಯಮತೀಯರನ್ನು ಮದುವೆಯಾದ ಬಳಿಕ ಸಂಕಟಕ್ಕೊಳಗಾದ ಅನೇಕರ ಕರುಣಾಜನಕ ಕತೆಗಳು ಇಂಟರ್‌ನೆಟ್‌ನಲ್ಲಿ ಧಾರಾಳವಾಗಿ ಸಿಗುತ್ತವೆ. ಅಗ್ನಿವೀರ್.ಕಾಮ್ ನಂತಹ ವೆಬ್‌ಸೈಟ್‌ಗಳಲ್ಲಿ ಹೆಚ್ಚಿನ ಮಾಹಿತಿ ಸಿಗುತ್ತದೆ. ಅವೆಲ್ಲ ನಮ್ಮ ಮನೆಯ ಮಕ್ಕಳಿಗೆ ತಿಳಿದಿರಬೇಕಾದ್ದು ಮುಖ್ಯ.
- ಕೊನೆಯದಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ನಮ್ಮ ಧರ್ಮದ ಬಗ್ಗೆ, ಅದರ ವಿಶೇಷತೆಗಳ ಬಗ್ಗೆ, ನಮ್ಮಲ್ಲಿನ ಬಹುದೇವತಾರಾಧನೆಯ ಮಹತ್ತ್ವದ ಬಗ್ಗೆ, ನಮ್ಮ ದೇವರ ಕಲ್ಪನೆಯ ಬಗ್ಗೆ, ನಮ್ಮ ಹೆಮ್ಮೆಯ ಪರಂಪರೆ–ಇತಿಹಾಸಗಳ ಬಗ್ಗೆ ನಮ್ಮ ಮಕ್ಕಳಿಗೆ ನಾವೇ ಕಲಿಸಬೇಕು. ಶಾಲೆಯಲ್ಲಿ ಇಂತಹ ಶಿಕ್ಷಣ ಎಷ್ಟರ ಮಟ್ಟಿಗೆ ಸಿಗುತ್ತಿದೆ ಎನ್ನುವುದು ನಮಗೆ ತಿಳಿದೇ ಇದೆ. ಹಾಗಾಗಿ, ಈ ಜವಾಬ್ದಾರಿಯನ್ನು ನಾವು ಸರಿಯಾಗಿ ನಿರ್ವಹಿಸಿದರೆ, ಮಕ್ಕಳಿಗೆ ಧರ್ಮ–ಆಧ್ಯಾತ್ಮದ ಬಗ್ಗೆ ಒಳ್ಳೆಯ ತಿಳುವಳಿಕೆ ನೀಡುವ ಪುಸ್ತಕಗಳನ್ನು ಓದಲು ಪ್ರೇರಣೆ ಕೊಟ್ಟರೆ, ನಮ್ಮ ಬುಡ ಗಟ್ಟಿಯಾದಂತೆ. ಆಗ ಅವರನ್ನು ಬ್ರೈನ್‌ವಾಶ್ ಮಾಡಲು ಯಾರಿಗೂ ಸಾಧ್ಯವಾಗುವುದಿಲ್ಲ.

ಹೀಗೆ, ನಾವೇ ಯೋಚಿಸಲು ಪ್ರಾರಂಭಿಸಿದರೆ, ನಮಗೇ ಅನೇಕ ಸಂಗತಿಗಳು ಹೊಳೆಯುತ್ತವೆ. ನಮ್ಮ ಮನೆ ಮಾತ್ರವಲ್ಲ, ನಮ್ಮ ಸ್ನೇಹಿತರ, ಬಂಧುಗಳ ಮನೆಯಲ್ಲೂ ಇಂತಹ ಮುಂಜಾಗ್ರತೆಗಳ ಬಗ್ಗೆ ಚರ್ಚೆ ನಡೆಯಬೇಕಾದ್ದು ಅಗತ್ಯ. ಹಾಗೆಯೇ, ಮನೆಯಲ್ಲಿ ಮಕ್ಕಳು ಎಲ್ಲರೊಂದಿಗೆ ಮುಕ್ತವಾಗಿ ಮಾತನಾಡಬಹುದಾದ, ತಮ್ಮ ಭಾವನೆಗಳನ್ನು ಹಂಚಿಕೊಳ್ಳಬಹುದಾದ ವಾತಾವರಣವೂ ಅಗತ್ಯ. ಆಗ, ಲವ್ ಜಿಹಾದನ್ನು ಎದುರಿಸುವುದು ಕಷ್ಟವಲ್ಲ.

# ರಾಮ್‌ಪ್ರಸಾದ್ ಬಿಸ್ಮಿಲ್ (06/11/1897–19/12/1927) ಮತ್ತು ಅಶ್ಫಾಕ್ ಉಲ್ಲಾಖಾನ್ (22/10/1900 – 19/12/1927)

ರಾಮ್ ಪ್ರಸಾದರ ಜನನ ಜೂನ್ 11, 1897 ಉತ್ತರ ಪ್ರದೇಶದ ಶಹಜಹಾನಪುರದಲ್ಲಾಯಿತು. ತಂದೆ ಮಾಲಾಧರ ತಾಯಿ ಮೂಲಮತಿ. ತಂದೆಯವರ ಶಿಕ್ಷಣಾಸಕ್ತಿಯಿಂದ ಹಿಂದಿ ಉರ್ದು ಬಂಗಾಳಿ ಮತ್ತು ಇಂಗ್ಲಿಷ್ ಕಲಿಕೆ. ತಾಯಿಯ ಸದೃಢ ವ್ಯಕ್ತಿತ್ವದಿಂದ ಪ್ರಭಾವಿತ. ತಮ್ಮ ಆತ್ಮ ಚರಿತ್ರೆಯಲ್ಲಿ ತಾಯಿಯ ಕುರಿತು ರಾಮ್ ಪ್ರಸಾದ್ ಹೀಗೆ ಬರೆಯುತ್ತಾರೆ "ನಮ್ಮ ವಂಶದಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು ಕೊಲ್ಲುತ್ತಿದ್ದರಂತೆ. ಮೊದಲ ಬಾರಿಗೆ ನನ್ನ ತಾಯಿ ಅದನ್ನು ವಿರೋಧಿಸಿ, ತಂಗಿಯರನ್ನು ಪೋಷಿಸಿ ಶಿಕ್ಷಣವನ್ನು ಕೊಡಿಸಿದರಂತೆ."

ರಾಮ್‌ಪ್ರಸಾದ್ ಹೆಸರಿನೊಂದಿಗೇ ಬೆಸೆದುಕೊಂಡಿರುವುದು ಅಷ್ಫಾಕ್ ಉಲ್ಲಾಖಾನ್‌ರದ್ದು. 1900, ಅಕ್ಟೋಬರ್ 22ರಂದು ಜನಿಸಿದ ಅಶ್ಫಾಕ್‌ನ ತಂದೆ ಶಫೀಕ್ ಉಲ್ಲಾಖಾನ್ ಬ್ರಿಟಿಷ್ ಆಡಳಿತದಲ್ಲಿ ಪೊಲೀಸ್ ಕೆಲಸದಲ್ಲಿದ್ದರು. ಮೂಲತಃ ಉತ್ತರ ಪ್ರದೇಶದ ಶಹಜಹಾನ್‌ಪುರದವರು.

ದೇಶಪ್ರೇಮವೇ ಇಬ್ಬರು ಪರಮ ರಾಷ್ಟ್ರಭಕ್ತರ ಸ್ನೇಹಕ್ಕೆ ಬುನಾದಿಯಾದ ಸಂದರ್ಭದ ಕುರಿತಾಗಿ ರಾಮ್ ಪ್ರಸಾದ್ ಈ ರೀತಿ ಬರೆದುಕೊಂಡಿದ್ದಾರೆ

"ನಾವಿಬ್ಬರು ಶಹಜಹಾನ್‌ಪುರದ ಶಾಲೆಯಲ್ಲಿ ಮೊದಲ ಬಾರಿಗೆ ಭೇಟಿಯಾಗಿದ್ದು ನನಗೆ ಚೆನ್ನಾಗಿ ನೆನಪಿದೆ. ಬ್ರಿಟಿಷರು ಶಾಶ್ವತವಾಗಿ ಭಾರತವನ್ನಾಳುವ ಉದ್ದೇಶವನ್ನು ಬಹಿರಂಗಪಡಿಸಿದ ನಂತರ ನಮ್ಮ ಭೇಟಿ ನಡೆಯಿತು. ನೀನು ನನ್ನನ್ನು ಭೇಟಿಯಾಗಲು, ಬಹುಮುಖ್ಯ ವಿಷಯವೊಂದರ ಬಗ್ಗೆ ಮಾತುಕತೆ ನಡೆಸಲು ಪ್ರಾಮಾಣಿಕವಾಗಿಯೇ ಪ್ರಯತ್ನಿಸುತ್ತಿದ್ದೆ. ಆದರೆ ಮುಸ್ಲಿಮನಾದ ಕಾರಣ ನಿನ್ನ ಉದ್ದೇಶದ ಬಗ್ಗೆ ನಾನು ಸಂಶಯ ಹೊಂದಿದೆ. ನಿನ್ನ ಜತೆ ನಾನು ಅವಮಾನಕಾರಿಯಾಗಿ ಮಾತನಾಡಿದಾಗ ನೀನು ತುಂಬಾ ನೊಂದುಕೊಂಡೆ ಎಂದು ನನಗೆ ಗೊತ್ತು. ಇಷ್ಟಾಗಿಯೂ




ನೀನು ಸೋಗುಹಾಕುತ್ತಿಲ್ಲ, ಪ್ರಾಮಾಣಿಕ ಕಾಳಜಿ ಹೊಂದಿದ್ದೀಯಾ ಎಂಬುದನ್ನು ಸ್ನೇಹಿತರ ಮೂಲಕ ಮನವರಿಕೆ ಮಾಡಿಕೊಡಲು ಯತ್ನಿಸಿದೆ. ನೀನು ಈ ದೇಶಕ್ಕಾಗಿ ಹೋರಾಡಲು ಕಟಿಬದ್ಧವಾಗಿದ್ದೆ. ಕೊನೆಗೆ ಜಯ ನಿನ್ನದಾಯಿತು. ನಿನ್ನ ಪ್ರಯತ್ನದಿಂದ ನನ್ನ ಹೃದಯದಲ್ಲೂ ಸ್ಥಾನ ಪಡೆದೆ."

ಸಮವಯಸ್ಕ ಬಿಸಿರಕ್ತದ ತರುಣರು ಸೇರಿ 'ಹಿಂದೂಸ್ಥಾನ್ ರಿಪಬ್ಲಿಕನ್ ಆರ್ಮಿ' ಎಂಬ ಸಂಘಟನೆ ಆರಂಭಿಸಿದರು. ಶಸ್ತ್ರಾಸ್ತ್ರ ಕ್ರಾಂತಿಯ ಮೂಲಕ ದೇಶವನ್ನು ದಾಸ್ಯದಿಂದ ವಿಮೋಚನೆ ಮಾಡುವುದು ಅದರ ಉದ್ದೇಶವಾಗಿತ್ತು. 1925ರಲ್ಲಿ ಸಂಘಟನೆ ತನ್ನ ಪ್ರಣಾಳಿಕೆಯನ್ನು ಹೊರತಂದಿತು. ಅದರ ಹೆಸರು 'ಕ್ರಾಂತಿಕಾರಿ'. ಶಹಜಹಾನ್‌ಪುರದ ಮುಖ್ಯ ಸಂಘಟಕ ರಾಮ್‌ಪ್ರಸಾದ್ ಬಿಸ್ಮಿಲ್ಲಾನೇ ಆಗಿದ್ದ.

ಒಮ್ಮೆ ಶಹಜಹಾನ್‌ಪುರದಿಂದ ಲಖನೌಗೆ ಪ್ರಯಾಣಿಸುತ್ತಿದ್ದ ರಾಮ್‌ಪ್ರಸಾದ್, ಪ್ರತಿ ಠಾಣೆಯಲ್ಲೂ ಹಣದ ಚೀಲವನ್ನು ರೈಲಿನ ಗಾರ್ಡ್‌ಗಳ ವ್ಯಾನಿಗೆ ತುಂಬುವುದನ್ನು ಗಮನಿಸಿದ. ಲಖನೌದಲ್ಲಿ ಅಷ್ಟೇನು ಪೊಲೀಸ್ ಭದ್ರತೆ ಇಲ್ಲ ಎಂಬುದು ಖಾತ್ರಿ ಆಯಿತು. 10,000 ರೂ.ಗಳಾದರೂ ಚೀಲದಲ್ಲಿರುತ್ತದೆ ಎಂದು ಅಂದಾಜಿನೊಂದಿಗೆ ರೈಲಿನ ನಂಬರ್ ಹಾಗೂ ಸಮಯವನ್ನು ದಾಖಲು ಮಾಡಿಕೊಂಡ. ಇದೇ ಖ್ಯಾತ 'ಕಾಕೋರಿ ರೈಲು ಲೂಟಿ' ಪಿತೂರಿಯ ಆರಂಭವಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೊಸ ಅಧ್ಯಾಯವನ್ನೇ ಬರೆದ ಘಟನೆಯನ್ನು ಸಾಧಿಸಿದ್ದು ಕೇವಲ 10 ಜನ. ರಾಮ್‌ಪ್ರಸಾದ್ ಬಿಸ್ಮಿಲ್, ಅಶ್ಫಾಕ್ ಉಲ್ಲಾಖಾನ್, ರಾಜೇಂದ್ರ ಲಾಹಿರಿ, ಠಾಕೂರ್ ರೋಶನ್ ಸಿಂಗ್, ಸಚೀಂದ್ರ ಬಕ್ಷಿ, ಚಂದ್ರ ಶೇಖರ್ ಆಜಾದ್, ಕೇಶವ ಚಕ್ರವರ್ತಿ, ಬನ್ವಾರಿ ಲಾಲ್, ಮುಕುಂದಿ ಲಾಲ್ ಮತ್ತು ಮನ್ಮಥ್ ನಾಥ್ ಗುಪ್ತಾ.

ಕಾಕೋರಿ ರೈಲು ದರೋಡೆ ನಡೆದು ಒಂದು ತಿಂಗಳು ಕಳೆದರೂ ಸರಕಾರಕ್ಕೆ ಯಾರೊಬ್ಬರನ್ನೂ ಬಂಧಿಸಲಾಗಲಿಲ್ಲ. ಕೊನೆಗೆ ದ್ರೋಹದಿಂದ ಬ್ರಿಟಿಷರ ಬಂಧನಕ್ಕೊಳಗಾದ ರಾಮ್‌ಪ್ರಸಾದ್ ಬಿಸ್ಮಿಲ್, ಅಶ್ಫಾಕ್ ಉಲ್ಲಾಖಾನ್, ರಾಜೇಂದ್ರ ಲಾಹಿರಿ ಹಾಗೂ ರೋಶನ್ ಸಿಂಗ್‌ರಿಗೆ ಗಲ್ಲಾಯಿತು.

1927, ಡಿಸೆಂಬರ್ 19. ನೇಣಿಗೆ ಕೊರಳೊಡ್ಡುವ ಸಮಯ ಬಂದೇ ಬಿಟ್ಟಿತು. ಒಂದೆಡೆ ಎತ್ತರದ ಧ್ವನಿಯಲ್ಲಿ, "ಭಾರತ್ ಮಾತಾ ಕೀ ಜೈ, ಬ್ರಿಟಿಷ್ ಆಡಳಿತಕ್ಕೆ ಧಿಕ್ಕಾರ" ಎಂದು ರಾಮ್‌ಪ್ರಸಾದ್ ನೇಣಿಗೆ ತಲೆಕೊಟ್ಟರೆ, ಇನ್ನೊಂದೆಡೆ "ಈ ದೇಶದ ಸ್ವಾತಂತ್ರ್ಯಕ್ಕಾಗಿ ನೇಣಿಗೇರುತ್ತಿರುವ ಮೊದಲ ಮುಸ್ಲಿಂ ನಾನೆಂಬ ಬಗ್ಗೆ ಹೆಮ್ಮೆಯೆನಿಸುತ್ತಿದೆ?" ಎನ್ನುತ್ತಾ ಅಷ್ಫಾಕ್ ಕೂಡ ಅದೇ ದಿನ, ಆದರೆ ಬೇರೆ ಜೈಲಿನಲ್ಲಿ ನೇಣಿಗೇರಿದ.

## ಎಲ್ಲೋ ಕೇಳಿದ ಕಥೆ

ಕಾಶ್ಮೀರದಲ್ಲಿ ಲಲ್ಲೇಶ್ವರಿ ಹೆಸರಿನ ಸಾಧ್ವಿಯಿದ್ದಳು. ಹನ್ನೆರಡನೇ ವಯಸ್ಸಿಗೇ ಅವರ ವಿವಾಹವಾಗಿತ್ತು. ಆದರೆ ಗಂಡನ ಮನೆಯಲ್ಲಿ ದೌರ್ಜನ್ಯಕ್ಕೊಳಗಾದ ಆಕೆ ಸಣ್ಣ ವಯಸ್ಸಿನಲ್ಲೇ ಮನೆತೊರೆಯಬೇಕಾಯಿತು. ಸಂಸಾರ ವ್ಯವಹಾರಗಳಲ್ಲಿ ವೈರಾಗ್ಯ ತಳೆದು ಆಕೆ ದೀಕ್ಷೆ ಪಡೆದ ಸನ್ಯಾಸಿನಿಯಾದಳು. ಭಗವದ್ ಭಕ್ತಿ ಭಜನೆಗಳಲ್ಲಿ ಲೀನಳಾದ ಆಕೆ ಪ್ರಾಪಂಚಿಕ ವ್ಯವಹಾರದಿಂದ ಸಂಪೂರ್ಣ ವಿಮುಖಳಾದಳು. ಜನರ ನಿಂದೆ ಹೀಯಾಳಿಕೆಗಳ ಕಡೆಗೂ ಆಕೆಗೆ ಲಕ್ಷ್ಯವಿರುತ್ತಿರಲಿಲ್ಲ. ಸಂತ ಮೀರಾಳಂತೆ ಭಜನೆ ಮಾಡುತ್ತ ಬೀದಿಗಳಲ್ಲಿ ನಡೆಯುತ್ತಿದ್ದ ಆಕೆಯನ್ನು ಕಂಡು ಜನರು ಉಪಹಾಸ ಮಾಡುತ್ತಿದ್ದರು.

ಹೀಗೆ ಒಂದು ದಿನ ಭಜನೆ ಮಾಡುತ್ತ ಆಕೆ ದೇಗುಲದ ಕಡೆ ಹೊರಟಿದ್ದಳು, ಆಕೆಯ ಹಿಂದೆ ಒಂದಿಷ್ಟು ಪುಂಡು ಹುಡುಗರ ತಂಡವೂ ಉಪಹಾಸ ಮಾಡುತ್ತ ಹೊರಟಿತ್ತು. ಇದನ್ನು ಕಂಡ ಓರ್ವ ದಾರಿಹೋಕ ವಸ್ತ್ರ ವ್ಯಾಪಾರಿಗೆ ಬಹಳ ಬೇಸರವಾಯಿತು. ಆತ ಆ ಪುಂಡು ಹುಡುಗರನ್ನು ಬಯ್ದು ಓಡಿಸಿದ ಆತ "ತಾಯಿ, ಜನರು ಹೀಗೆ ಉಪಹಾಸ ಮಾಡುತ್ತಿದ್ದರೂ ಉಪೇಕ್ಷೆ ಮಾಡಿ ಹೋಗುತ್ತಿರುವುದು ಹೇಗೆ ಸಾಧ್ಯ?" ಎಂದು ಪ್ರಶ್ನಿಸಿದ. ಆಗ ಲಲ್ಲೇಶ್ವರಿ ವಸ್ತ್ರ ವ್ಯಾಪಾರಿಯಿಂದ ಒಂದು ಬಟ್ಟೆಯನ್ನು ಕೊಡು ಎಂದು ಕೇಳಿದಳು. ನಂತರ ಅದನ್ನು ಎರಡು ತುಂಡು ಮಾಡುವಂತೆ ಹೇಳಿದಳು. ನಂತರ ಒಂದೊಂದು ತುಂಡನ್ನು ಒಂದೊಂದು ಭುಜದ ಮೇಲೆ ಹಾಕಿಕೊಂಡು ಊರಿನ ಬೀದಿಯಲ್ಲಿ ಹೊರಟಳು. ದಾರಿಯಲ್ಲಿ ಯಾರಾದರೂ ಉಪಹಾಸ ಗೇಲಿ ಮಾಡಿದರೆ ಬಲಭುಜದ ಮೇಲಿರುವ ಬಟ್ಟೆಯಲ್ಲಿ ಒಂದು ಕಲ್ಲನ್ನು ಗಂಟು ಹಾಕುತ್ತಿದ್ದಳು, ಹಾಗೇ ಯಾರಾದರೂ ವಂದಿಸಿದರೆ, ಗೌರವ ಸೂಚಿಸಿದರೆ ಎಡಭುಜದ ಮೇಲಿರುವ ಬಟ್ಟೆಯಲ್ಲಿ ಒಂದು ಕಲ್ಲನ್ನು ಗಂಟು ಹಾಕುತ್ತಿದ್ದಳು. ಹೀಗೆ ದೇವಸ್ಥಾನದವರೆಗೆ ಹೋಗಿ ತಿರುಗಿ ಬಂದು ಆ ವಸ್ತ್ರ ವ್ಯಾಪಾರಿಗೆ ಎರಡೂ ಬಟ್ಟೆಯ ತುಂಡುಗಳನ್ನು ನೀಡಿ ಕಲ್ಲುಗಳನ್ನು ತೂಕಮಾಡು ಎಂದಳು. ಎಣಿಸಿದಾಗ ಎರಡೂ ಗಂಟುಗಳ ತೂಕ ಸಮನಾಗಿತ್ತು. ಆಗ ಸಂತ ಲಲ್ಲೇಶ್ವರಿ ಹೇಳಿದಳು "ಪ್ರಶಂಸೆ ಅಥವಾ ನಿಂದೆ ಇವೆರಡರ ಬಗ್ಗೆಯೂ ನಾವು ಚಿಂತಿಸಬಾರದು, ಏಕೆಂದರೆ ಒಂದು ಇನ್ನೊಂದನ್ನು ಸರಿದೂಗಿಸುತ್ತದೆ. ಆದ್ದರಿಂದ ನಾವು ಎಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡಬೇಕು, ಸಮಭಾವದಿಂದ ಗ್ರಹಿಸಬೇಕು".

## ಪುಸ್ತಕದಿಂದ...

ಸಂಘಕಾರ್ಯಕ್ಕಾಗಿ ದೀನದಯಾಳಜಿಯವರು ಪ್ರಾಂತದ ಉದ್ದಗಲಕ್ಕೂ ಪ್ರವಾಸ ಮಾಡಬೇಕಾಗುತ್ತಿತ್ತು. ಆದರೆ ತಮ್ಮ ಅನುಕೂಲಕ್ಕಾಗಿ ಅವರು ಬೇರೆಯವರಿಗೆ ಎಂದೂ ತೊಂದರೆ ಕೊಡುವವರಲ್ಲ. ತಮ್ಮಿಂದ ಯಾರಿಗೂ ತೊಂದರೆಯಾಗದಿರಲೆಂದು ತಾವೇ ಕಷ್ಟವನ್ನನುಭವಿಸುವ ಸ್ವಭಾವ ಅವರದು. ಒಮ್ಮೆ ಪ್ರವಾಸ ಮಾಡುತ್ತ ರೈಲಿನಲ್ಲಿ ಒಂದು ಊರಿಗೆ ಹೋದರು. ರೈಲು ತಲುಪುವುದು ಎರಡು ಗಂಟೆ ತಡವಾಯಿತು. ನಿಲ್ದಾಣದಲ್ಲಿ ಬಂದಾಗ ರಾತ್ರಿ 12ಗಂಟೆಯಾಗಿತ್ತು. ಆದರೆ ಅಂತಹ ಅಪರಾತ್ರಿಯಲ್ಲಿ ಊರಲ್ಲಿ ಹೋಗುವುದರಿಂದ ತಾವು ಹೋಗುವ ಮನೆಯವರಿಗೆ ತುಂಬ ಕಷ್ಟವಾಗುವುದೆಂದು ಯೋಚಿಸಿದರು. ಆದ್ದರಿಂದ ಬೆಳಗ್ಗೆ ಎದ್ದು ಹೋದರಾಯಿತು ಎಂದು ಯೋಚಿಸಿ ನಿಲ್ದಾಣದಲ್ಲೇ ಮಲಗಿದರು. ಸೆಕೆ ಬಹಳವಿದ್ದುದರಿಂದ ಪ್ರಯಾಣಿಕರ ಕೊಠಡಿಗೆ ಹೋಗಲಿಲ್ಲ. ನಿಲ್ದಾಣದಲ್ಲೇ ಮಲಗಿದರೇನೋ ನಿಜ, ಆದರೆ ಕೆಲವು ಸಮಯದ ಮುಂಚೆ ಮಳೆಯಾಗಿದ್ದುದರಿಂದ ನೆಲ ಒದ್ದೆಯಾಗಿತ್ತು. ಅದರಿಂದಾಗಿ ಬೆಳಗ್ಗೆ ಏಳುವಾಗ ಅವರಿಗೆ ಬೆನ್ನೆಲ್ಲ ನೋವಾಯಿತು, ಜ್ವರವೂ ಬಂದಿತು. ಆದರೆ ಬೆಳಗ್ಗೆ ಊರಲ್ಲಿ ಹೋದಮೇಲೆ ತಮ್ಮ ಅನಾರೋಗ್ಯದ ಬಗ್ಗೆ ಯಾರಲ್ಲೂ ಚಕಾರ ಎತ್ತಲಿಲ್ಲ, ಎಲ್ಲ ಕೆಲಸ ಮಾಡಿ ಮುಗಿಸಿದರು. ಆರೋಗ್ಯಕ್ಕಾಗಿ ಲಂಘನ ಮಾಡಿದರು ! 'ಲಂಘನಂ ಪರಮೌಷಧಮ್'! ಅದಂತೂ ಅವರಿಗೆ ನಿತ್ಯ ರೂಢಿ ಇದ್ದ ಮಾತೇ !

ದೀನದಯಾಳಜಿ ಸಹಪ್ರಾಂತಪ್ರಚಾರಕರಾಗಿದ್ದಾಗಿನ ಘಟನೆ: ಜಾಲೌನದಲ್ಲಿ ಅವರ ಕಾರ್ಯಕ್ರಮ ನಿಶ್ಚಯವಾಗಿತ್ತು. ಅವರು ಲಖ್ನೋದಿಂದ ಮಧ್ಯಾಹ್ನದ ರೈಲಿನಲ್ಲಿ ಹೊರಟು ಕಾನಪುರದಲ್ಲಿ ರೈಲು ಬದಲಾಯಿಸಿ ಮುಂದೆ ಹೋಗಬೇಕಾಗಿತ್ತು. ದುರದೃಷ್ಟವಶಾತ್ ಕಾನಪುರಕ್ಕೆ ಬರುವ ರೈಲು ತಡವಾಗಿ ಅವರು ಮುಂದೆ ಪ್ರಯಾಣ ಬೆಳೆಸಬೇಕಿದ್ದ ರೈಲು ಹೊರಟುಹೋಗಿತ್ತು. ರೈಲು ಹೊರಟುಹೋದರೇನಾಯಿತು! ಸಂಘದ ಕಾರ್ಯಕ್ರಮ ನಿಶ್ಚಯವಾಗಿತ್ತು, ಅದನ್ನು ನಡೆಸದಿದ್ದರೆ ಹೇಗಾದೀತು? ಅಂದ ಮೇಲೆ ಜಾಲೌನಕ್ಕೆ ತಲುಪುವುದು ಹೇಗೆ? ಕಾನಪುರದಲ್ಲಿ ಒಬ್ಬ ಸ್ವಯಂಸೇವಕನ ಬಳಿ ಮೋಟಾರು ಸೈಕಲ್ ಇತ್ತು. ಅದರ ಮೇಲೆ ಹೋಗುವುದೆಂದು ನಿಶ್ಚಯವಾಯಿತು. ದೀನದಯಾಳಜಿ ಮೋಟಾರ್ ಸೈಕಲ್ಲಿನ ಹಿಂಭಾಗದಲ್ಲಿ ಕುಳಿತರು. ಚಾಲಕನಾದ ಸ್ವಯಂಸೇವಕ ವಾಹನವನ್ನು ವೇಗವಾಗಿ ಓಡಿಸುತ್ತಿದ್ದ. ಆದರೆ ತನ್ನ ಹಿಂದೆ ಸಹಪ್ರಾಂತ ಪ್ರಚಾರಕರು ಕುಳಿತಿದ್ದುದರಿಂದ ಅವರ ಸುರಕ್ಷತೆಯ ಚಿಂತೆಯೂ ಅವನಿಗಿತ್ತು. ವಾಹನದ ವೇಗದಿಂದಾಗಿ ಸೈಲೆನ್ಸರ್ ಕಾದು ಬಿಸಿಯಾಯಿತು. ಒಂದು ಸಲ ಅವರ ಕಾಲು ಸೈಲೆನ್ಸರಿಗೆ ತಗುಲಿತು. ಮಾಂಸಖಂಡ ಅದಕ್ಕೆ ಅಂಟಿಕೊಂಡಿತು. ಆದರೂ ಅವರು ತುಟಿ ಪಿಟಕ್ಕೆನ್ನಲಿಲ್ಲ. ದಾರಿಯಲ್ಲು ಉರಯಿ ಎಂಬ ಗ್ರಾಮದ ಹತ್ತಿರ ರಾತ್ರಿ ಕಳೆಯಬೇಕಾಯಿತು. ಕಾಲಿನ ಮಾಂಸಖಂಡ ಕಿತ್ತು ಅದರಿಂದ ಬಹಳ ಉರಿ, ನೋವು ಆಯಿತು. ಆದರೆ ಅವರು ಯಾರಿಗೂ ಹೇಳಲಿಲ್ಲ. ಒಬ್ಬ ಸ್ವಯಂಸೇವಕನ ಮನೆಯಲ್ಲಿ ಮಲಗಿದರು. ಊಟದ ಬಗ್ಗೆ ಆತ ವಿಚಾರಿಸಲು ಊಟ ಮಾಡಿಯೇ ಬಂದಿದ್ದೇವೆಂದು ಹೇಳಿ ಉಪವಾಸ ಮಲಗಿದರು. ಮರುದಿನ ಬೆಳಗ್ಗೆ ಜಾಲೌನಕ್ಕೆ ಹೋಗಿ ಕಾರ್ಯಕ್ರಮ ಮುಗಿಸಿ ಕಾನಪುರಕ್ಕೆ ವಾಪಸಾದರು. ಕಾನಪುರದ ಕಾರ್ಯಕರ್ತರು ದೀನದಯಾಳಜಿಯವರ ಕಾಲಿಗಾದ ಗಾಯವನ್ನು ನೋಡಿ ಗಾಬರಿಯಾದರು. ಆದರೆ ಅವರು ಮಾತ್ರ ತಮಗೇನೂ ಆಗೇ ಇಲ್ಲವೆನ್ನುವಂತಿದ್ದರು. ತಮ್ಮ ನಿಸರ್ಗೋಪಚಾರದ ಅಭ್ಯಾಸದ ಲಾಭ ಪಡೆದು ಜೇನುತುಪ್ಪದೊಡನೆ ಎಣ್ಣೆ ನೀರು ಬೆರೆಸಿ ಗಾಯದ ಮೇಲೆ ಪಟ್ಟಿ ಕಟ್ಟಿದರು. ಮುಂದೆ ಮೂರುಮೂರುವರೆ ತಿಂಗಳು ಅವರು ಕಾಲಿಗೆ ಪಟ್ಟಿ ಕಟ್ಟಿಕೊಂಡೇ ಕೆಲಸ ಮಾಡಿದರು !

**ಪುಸ್ತಕದ ಹೆಸರು** "ನಂದಾದೀಪವಿದು ...! ಬೆಳಗಿದ ಬಾಳಿನ ಕಥಾನಕ"
**ಲೇಖಕರು:** ಭಾ ವಂ ದೇಶಪಾಂಡೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರು ಹಾಗೂ ಭಾರತೀಯ ಜನಸಂಘ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜೀವನಕಥೆ.



**ಹೆಸರು:** ಡಾಂಗಿ

**ಮೂಲ:** ಮೂಲತಃ ಮಹಾರಾಷ್ಟ್ರದ ನಾಸಿಕ್ ಮತ್ತು ಅಹ್ಮದ್‌ನಗರ ಪ್ರದೇಶಗಳ ಡಾಂಗ್ಸ್ ಹೆಸರಿನ ಗುಡ್ಡಗಾಡು ಪ್ರದೇಶಗಳಲ್ಲಿ ಕಂಡುಬರುತ್ತವೆ.

**ವಿಶೇಷತೆ:** ಮಧ್ಯಮ ಗಾತ್ರ, ಬಿಳಿ ಬಣ್ಣದ ಮೈಮೇಲೆ ಕಪ್ಪು ಚುಕ್ಕೆಗಳು ಹಾಗೂ ಪಟ್ಟೆಗಳನ್ನು ಹೊಂದಿರುತ್ತವೆ. ಹೆಚ್ಚು ಮಳೆ ಇರುವ ಪ್ರದೇಶಕ್ಕೆ ಚೆನ್ನಾಗಿ ಹೊಂದಿಕೊಳ್ಳಬಲ್ಲವಾಗಿ. ಇವುಗಳ ಚರ್ಮದಿಂದ ಒಂದು ತರಹದ ಜಿಡ್ಡು ಒಸರುತ್ತವೆ, ಇದರಿಂದಾಗಿ ಅತಿಯಾದ ಮಳೆಯನ್ನೂ ತಡೆದುಕೊಳ್ಳಬಲ್ಲವು.

**ಹಾಲಿನ ಪ್ರಮಾಣ:** ಸಾಧಾರಣ ಹಾಲಿನ ಪ್ರಮಾಣ, ಸರಾಸರಿ ಒಂದು ಕರಾವಿನಲ್ಲಿ 450ಲೀಟರ್.

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ಶ್ರೀನಿವಾಸ್ ಹೆಗಡೆ, ಪ್ರತಾಪ್ ಕೊಡಂಚ, ರಾಧಾಕೃಷ್ಣ ಹೊಳ್ಳ, ಅನಿಲ್‌ಕುಮಾರ್ ಮೊಳಹಳ್ಳಿ, ಸತ್ಯನಾರಾಯಣ ಶಾನಭಾಗ್



ಸಾರ್ವಜನಿಕ ಹಿತಾಸಕ್ತಿ ದಾವೆ (PIL) ಯ ಮಾತೆ ಎಂದೇ ಗುರುತಿಸಲ್ಪಡುವ ಹಿರಿಯ ವಕೀಲೆಯಾಗಿದ್ದ ಪುಷ್ಪಾ ಕಪಿಲಾ ಹಿಂಗೋರಾನಿ ಅವರ ಭಾವಚಿತ್ರವನ್ನು ಸುಪ್ರೀಂಕೋರ್ಟಿನ ಎರಡನೇ ಗ್ರಂಥಾಲಯದಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿದೆ. ಪುಷ್ಪಾ ಕಪಿಲಾ ಹಿಂಗೋರಾನಿ ಈ ಗೌರವಕ್ಕೆ ಭಾಜನವಾದ ಮೊದಲ ಮಹಿಳಾ ವಕೀಲರೆನಿಸಿದ್ದಾರೆ. 1979ರಲ್ಲಿ ಪುಷ್ಪಾ ಕಪಿಲ ಅವರು ಬಿಹಾರದ ವಿಚಾರಣಾಧೀನ ಖೈದಿಗಳ ಪರ ಸುಪ್ರೀಂ ಕೋರ್ಟಿನಲ್ಲಿ ಸಲ್ಲಿಸಿದ ಹೇಬಿಯಸ್ ಕಾರ್ಪಸ್ ಅರ್ಜಿ ಮತ್ತು ಅವರು ಮಂಡಿಸಿದ ವಾದಕ್ಕೆ ಜಯ ದೊರೆತು ವಿಚಾರಣಾಧೀನ ಖೈದಿಗಳ ಬಿಡುಗಡೆಯಾಯಿತು. ಹುಸೈನರಾ ಖಾಟುನ್ ಪ್ರಕರಣ ಎಂದೇ ಗುರುತಿಸಲ್ಪಡುವ ಈ ಮಹತ್ತರ ಪ್ರಕರಣದ ತೀರ್ಪಿನಿಂದ ಮುಂದೆ ಭಾರತದಾದ್ಯಂತ ಸುಮಾರು 40,000ಕ್ಕೂ ಹೆಚ್ಚು ವಿಚಾರಣಾಧೀನ ಖೈದಿಗಳ ಬಿಡುಗಡೆ ಸಾಧ್ಯವಾಯಿತು. ಈ ಪ್ರಕರಣವು ಮೊದಲ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಾಗಿದ್ದು ಸಮಾಜದಲ್ಲಿರುವ ಸಾರ್ವಜನಿಕ ರೀತಿಯ ಸಮಸ್ಯೆಗಳ ಪರಿಹಾರಕ್ಕಾಗಿ ಜನರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಲ್ಲ ಹೊಸರೀತಿಯ ನ್ಯಾಯವಿತರಣ ಪದ್ಧತಿಗೆ ನಾಂದಿ ಹಾಡಿತು. ಪುಷ್ಪ ಕಪಿಲಾ ಹಿಂಗೋರಾನಿಯವರು ಆಕಾಲದಲ್ಲಿ ಸುಪ್ರೀಂ ಕೋರ್ಟಿನಲ್ಲಿ ವಕೀಲಿಕೆ ಮಾಡುತ್ತಿದ್ದ ಮೂರೇ ಮೂರು ಮಹಿಳಾ ವಕೀಲರಲ್ಲಿ ಒಬ್ಬರಾಗಿದ್ದರೆಂಬುದು ಕೂಡಾ ಗಮನಾರ್ಹ ಸಂಗತಿ. 2013ರಲ್ಲಿ 86ರ ಇಳಿವಯಸ್ಸಿನಲ್ಲಿ ನಿಧನರಾದ ಅವರು ತಮ್ಮ ಪತಿ ನಿರ್ಮಲ್ ಹಿಂಗೋರಾನಿ ಜೊತೆ ಸೇರಿ ನೂರಕ್ಕೂ ಹೆಚ್ಚು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಿದ್ದರು.




**ಐಐಟಿ ಪ್ರವೇಶ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರೂ ಅದನ್ನು ತಿರಸ್ಕರಿಸಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಸೇರಿ ಸೇನಾ ಸೇವೆಯನ್ನು ಆಯ್ಕೆ ಮಾಡಿಕೊಂಡು ಉತ್ತರಾಖಂಡದ ಕಾಶಿಪುರದ ಶಿವಾಂಶ ಜೋಷಿ ಎಂಬ 17 ವರ್ಷದ ಬಾಲಕ ವಯಸ್ಸಿಗೆ ಮೀರಿದ ಆದರ್ಶ ಮೆರೆದಿದ್ದಾನೆ. ಐಐಟಿ ಪ್ರವೇಶ ಪಡೆದು ಮುಂದೆ ಉತ್ತಮ ನೌಕರಿ ಮತ್ತು ಐಷಾರಾಮಿ ಜೀವನವನ್ನು ಬಯಸದೇ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಪ್ರವೇಶಕ್ಕಾಗಿ ಕೇಂದ್ರ ನಾಗರಿಕ ಸೇವಾಪ್ರಾಧಿಕಾರ(ಯುಪಿಎಸ್‌ಸಿ) ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ದೇಶಕ್ಕೇ ಮೊದಲನೇ ಸ್ಥಾನ ಪಡೆದ ಶಿವಾಂಶ ಜೋಷಿ, "ಚಿಕ್ಕಂದಿನಿಂದಲೂ ದೇಶಕ್ಕಾಗಿ ಏನಾದರೂ ಮಾಡಬೇಕೆಂಬುದು ನನ್ನ ಬಯಕೆ, ದೇಶ ರಕ್ಷಣೆಗಾಗಿ ಜೀವನ ಮುಡಿಪಿಟ್ಟಿರುವ ಅಜಿತ ಧೋವಲ್, ಬಿಪಿನ ರಾವತರಂತಹ ಅನೇಕರನ್ನು ನೀಡಿದೆ ನನ್ನ ಊರು, ಇಂತಹ ಹಲವರಿಂದ ಸ್ಫೂರ್ತಿ ಪಡೆದು ಅವರಂತೇ ನಾನೂ ಮುನ್ನಡೆಯಬೇಕು ಎಂದು ಐಐಟಿಯಂತಹ ಸುಲಭ ಜೀವನ ಬಿಟ್ಟು ಈ ಕಠಿಣ ಹಾದಿಯಲ್ಲಿ ನಾನು ಹೆಮ್ಮೆಯಿಂದ ಹೆಜ್ಜೆ ಇಡುತ್ತಿದ್ದೇನೆ" ಎಂದು ತನ್ನ ಆಯ್ಕೆಯ ಹಿಂದಿರುವ ಧ್ಯೇಯವನ್ನು ವಿವರಿಸಿದ್ದಾನೆ**

ಬೆಂಗಳೂರಿನ ಕಲ್ಯಾಣನಗರದ ಶಕ್ತಿ ಗಣಪತಿ ದೇವಸ್ಥಾನ ಕಸವನ್ನೂ ಸದ್ಬಳಕೆ ಮಾಡುತ್ತಿದ್ದು ಶೂನ್ಯ ತ್ಯಾಜ್ಯ ದೇವಸ್ಥಾನವಾಗಿದೆ. ಅನ್ನದಾನ ಹಾಗೂ ದೇವರಿಗೆ ಅರ್ಪಿತವಾದ ಹೂಗಳಿಂದ ಗೊಬ್ಬರ ಉತ್ಪಾದನೆ ಮಾಡಲಾಗುತ್ತದೆ. ಅನ್ನದಾನದ ನಂತರ ಉಳಿಯುವ ತಟ್ಟೆ ಹಾಗೂ ದೇವರಿಗೆ ಬರುವ ಹೂಗಳ ತ್ಯಾಜ್ಯ ನಿರ್ವಹಣೆ ದೇವಸ್ಥಾನದ ನಿರ್ವಹಣಾ ಮಂಡಳಿಗೆ ದೊಡ್ಡ ತಲೆನೋವಾಗಿತ್ತು. ಕೇವಲ 85000 ಬಂಡವಾಳದಿಂದ ಆರಂಭವಾದ ಕಾಂಪೋಸ್ಟ ಗೊಬ್ಬರ ಉತ್ಪಾದಿಸುವ ಘಟಕದಿಂದ ದೇವಸ್ಥಾನದ ಸ್ವಚ್ಛತೆ ಮರುಕಳಿಸಿದ್ದಲ್ಲದೇ "ಮಡಿಗೊಬ್ಬರ" ಎಂದು ನಾಮಕರಣ ನೀಡಿರುವ ಈ ಕಾಂಪೋಸ್ಟ ಮಾರುಕಟ್ಟೆಯಲ್ಲಿ ಸಿಗುವ ಗೊಬ್ಬರಕ್ಕಿಂತ ಶುದ್ಧವಾಗಿದ್ದು ಹೆಚ್ಚಿನ ಬೆಲೆಯಲ್ಲಿ ಮಾರಾಟವೂ ಆಗುತ್ತಿದೆ. ದೇವಸ್ಥಾನಕ್ಕೆ ಇದರಿಂದ ಆದಾಯವೂ ದೊರೆಯುತ್ತಿದೆ. ಇದಲ್ಲದೇ ದೇವರ ಅಭಿಷೇಕಕ್ಕೆ ಪ್ಲಾಸ್ಟಿಕ್ ಪ್ಯಾಕೇಟ ಹಾಲಿನ ಬದಲು ಸ್ಥಳೀಯವಾಗಿ ದೊರೆಯುವ ತಾಜಾ ಹಾಲನ್ನು ಬಳಸಿ ಪ್ಲಾಸ್ಟಿಕ್‌ನ ಬಳಕೆಯನ್ನು ಸಂಪೂರ್ಣವಾಗಿ ಕಡಿತಗೊಳಿಸಲಾಗಿದೆ.

**ವಂದೇಮಾತರಂ ಹಾಡುತ್ತಾರೆ ಮತ್ತು ರಾಷ್ಟ್ರಧ್ವಜದ ಬಣ್ಣವಿರುವ ಬಟ್ಟೆ ಧರಿಸುತ್ತಾರೆ ಎನ್ನುವ ಕಾರಣಕ್ಕೆ ಉತ್ತರ ಪ್ರದೇಶದ ಆಗ್ರಾದ ಒಂದು ಇಡೀ ಕುಟುಂಬವನ್ನೇ ಮುಸ್ಲಿಂ ಸಮುದಾಯದಿಂದ ಬಹಿಷ್ಕಾರ ಹಾಕಲಾಗಿದೆ. ಪಾದರಕ್ಷೆಗಳ ಬಿಡಿ ಭಾಗಗಳನ್ನು ಮಾರಾಟ ಮಾಡಿಜೀವನ ಸಾಗಿಸುತ್ತಿರುವ ಇಲ್ಲಿನ ನಿವಾಸಿ ಗುಲ್‌ಚಮನ್ ಶೇರ್ವಾನಿ ಎನ್ನುವ ಮುಸ್ಲಿಂ ಸಮುದಾಯದ ಈ ವ್ಯಕ್ತಿಗೆ ವಂದೇಮಾತರಂ ಎಂದರೆ ಬಾಲ್ಯದಿಂದಲೂ ಅಚ್ಚುಮೆಚ್ಚು ಆದರೆ ಇದೇ ಕಾರಣಕ್ಕೆ ದಿಲ್ಲಿಯ ಜಾಮಾ ಮಸೀದಿಯ ಇಮಾಮ್ ಇವರನ್ನು ಕಾಫಿರ್ ಎಂದು ಘೋಷಿಸಿದ್ದು, ಶೇರ್ವಾನಿಯ ಮಗಳನ್ನು ಕೂಡ ಶಾಲೆಯಿಂದ ಹೊರಹಾಕಲಾಗಿದೆ. ಆದರೂ ಯಾವ ಬೆದರಿಕೆಯಿಂದಲೂ ತನ್ನನ್ನು ವಂದೇ ಮಾತರಂ ಹಾಡುವುದರಿಂದ ತಡೆಯಲಾಗದು ಎಂದು ಶೇರ್ವಾನಿ ಹೇಳಿಕೊಂಡಿದ್ದಾರೆ.**

# ಸಾಲುದ್ದದ ಸುದ್ದಿಗಳು

ಹಿರಿಯ ನಾಗರೀಕರಿಗೆ ರೈಲು ಟಿಕೆಟ್ ದರದ ಮೇಲೆ ನೀಡುವ ಸಬ್ಸಿಡಿಯನ್ನು ಸ್ವಇಚ್ಛೆಯಿಂದ ತ್ಯಜಿಸುವ ಯೋಜನೆಯಡಿ ಈ ವರ್ಷ ಸುಮಾರು 9 ಲಕ್ಷ ಹಿರಿಯ ನಾಗರಿಕರು ತಮಗೆ ಸರ್ಕಾರದಿಂದ ಸಿಗುವ ಸಹಾಯಧನವನ್ನು ತೆಗೆದುಕೊಳ್ಳದೇ ಬಿಟ್ಟು ಬಿಡಲು ತಮ್ಮನ್ನು ನೋಂದಾಯಿಸಿಕೊಂಡಿದ್ದಾರೆ. ಹಿರಿಯ ನಾಗರಿಕರು ಈ




ಮಾದರಿ ನಡೆಯಿಂದಾಗಿ ರೇಲ್ವೆ ಇಲಾಖೆಗೆ ಸುಮಾರು 40 ಕೋಟಿ ವಾರ್ಷಿಕ ಹಣ ಉಳಿತಾಯವಾಗಲಿದೆ. ಹಿಂದಿನ ವರ್ಷವೇ ಪ್ರಾರಂಭವಾಗಿದ್ದ ಈ ಯೋಜನೆಯಡಿ ಸಂಪೂರ್ಣ ಸಬ್ಸಿಡಿ ತ್ಯಜಿಸುವ ಆಯ್ಕೆಯಿತ್ತು, ಈ ವರ್ಷ ಶೇ. 50ರಷ್ಟು ಸಬ್ಸಿಡಿ ತ್ಯಜಿಸುವ ಆಯ್ಕೆಯನ್ನೂ ಸೇರಿಸಲಾಗಿದ್ದು, ನೋಂದಾಯಿತರ ಸಂಖ್ಯೆ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಎರಡರಷ್ಟು ವೃದ್ಧಿಯಾಗಿರುವುದೆ. ಪ್ರಸ್ತುತ ಪ್ರಯಾಣದ ವೆಚ್ಚದ ಶೇ. 43ರಷ್ಟನ್ನು ರೇಲ್ವೆ ಇಲಾಖೆಯೇ ಭರಿಸುತ್ತಿದ್ದು ಇದರಿಂದ ರೈಲ್ವೇಗೆ ವಾರ್ಷಿಕ 30 ಸಾವಿರ ಕೋಟಿಯಷ್ಟು ನಷ್ಟವಾಗುತ್ತಿದೆ. ಇದರಲ್ಲಿ 1600 ಕೋಟಿಯಷ್ಟು ಹಣ ಅನೇಕ ರೀತಿಯ ಪ್ರಯಾಣದರದ ಮೇಲಿನ ಸಬ್ಸಿಡಿಗೆ ವೆಚ್ಚವಾಗುತ್ತಿದೆ.



**ಅರುಣಾಚಲ ಪ್ರದೇಶದಲ್ಲಿ ಹರಿಯುವ ಬ್ರಹ್ಮಪುತ್ರ (ಸಿಯಾಂಗ್ ಎಂದೂ ಕರೆಯಲಾಗುತ್ತದೆ) ನದಿ ಇದೀಗ ಕಪ್ಪು ಬಣ್ಣಕ್ಕೆ ತಿರುಗುತ್ತಿರುವ ಆತಂಕಕಾರಿ ವಿದ್ಯಮಾನ ನಡೆಯುತ್ತಿದೆ. ಪ್ರಧಾನಿ ಮೋದಿಯವರಿಗೆ ಈ ಬಗ್ಗೆ ಬರೆದಿರುವ ಪತ್ರದಲ್ಲಿ ಅರುಣಾಚಲ ಪ್ರದೇಶದ ಕಾಂಗ್ರೆಸ್ ಶಾಸಕ ನಿನೋಂಗ್ ಎರಿಂಗ್ ಇದರ ಹಿಂದೆ ಚೀನಾದ ಕೈವಾಡವಿದೆ ಎಂದು ಶಂಕಿಸಿದ್ದಾರೆ. ಬ್ರಹ್ಮಪುತ್ರ ನದಿಯ ದಿಶೆಯನ್ನು ಬದಲಿಸಲು 1000 ಕಿ.ಮೀ ಉದ್ದದ ಸುರಂಗ ಮಾರ್ಗವನ್ನು ನಿರ್ಮಿಸುವ ಯೋಜನೆಯನ್ನು ಚೈನಾ ಕೈಗೆತ್ತಿಕೊಂಡಿರುವುದು ಈ ರೀತಿಯ ಕಶ್ಮಲ ಹಾಗು ಸಿಮೆಂಟ್ ಮಿಶ್ರಿತ ಕಪ್ಪು ನೀರು ಹರಿಯುತ್ತಿರುವ ಹಿಂದಿರುವ ಕಾರಣ ಎಂದು ಅವರು ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ. ಚೈನಾ ತನ್ನ ಮರುಭೂಮಿ ಪ್ರದೇಶ ತಕ್ಲಾಮಾಕನ್‌ಗೆ ನೀರು ಹರಿಸಲು ಕ್ಸಿನ್‌ಜಿಯಾಂಗ್‌ನಲ್ಲಿ ಸುರಂಗ ನಿರ್ಮಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಕಳೆದ ವರ್ಷ ಘೋಷಿಸಿತ್ತು. ದೇಶದ ಬೃಹತ್ ನದಿಗಳಲ್ಲೊಂದಾಗಿರುವ ಬ್ರಹ್ಮಪುತ್ರ ನದಿ ಕಳೆದ ಎರಡು ತಿಂಗಳುಗಳಲ್ಲಿ ಹಠಾತ್ತನೆ ಕಪ್ಪು ಬಣ್ಣಕ್ಕೆ ತಿರುಗುವುದು ಬೇರಾವ ವಿದ್ಯಮಾನಗಳಿಂದಲೂ ಚೀನಾದ ನಿರ್ಮಾಣ ಕಾರ್ಯವಲ್ಲದೇ ಬೇರಾವ ಕಾರಣದಿಂದಲೂ ಸಾಧ್ಯವಿಲ್ಲ ಎನ್ನುವುದು ಹಲವು ಜನರ ಅಭಿಪ್ರಾಯವಾಗಿದೆ**

ವಿಶ್ವ ಪರಿಸರ ದಿನ ಜೂನ್ 5ರಿಂದ ಆರಂಭವಾದ ಸಮರ್ಥ ಭಾರತ ಆಯೋಜಿತ ಕೋಟಿ ವೃಕ್ಷ ಅಭಿಯಾನದ ಮೊದಲ ಹಂತದ ಮುಕ್ತಾಯದ ವೇಳೆಗೆ ಕರ್ನಾಟಕದಾದ್ಯಂತ ಕಳೆದ 3 ತಿಂಗಳು ನಡೆದ ಗಿಡನೆಡುವ ಕಾರ್ಯದಲ್ಲಿ 125 ಕ್ಕೂ ಹೆಚ್ಚು ಸರ್ಕಾರೇತರ ಸಂಸ್ಥೆಗಳು ಭಾಗವಹಿಸಿದ್ದು 28000ಕ್ಕೂ ಅಧಿಕ ನೋಂದಾಯಿತ ಸ್ವಯಂಸೇವಕರು ಭಾಗಿಯಾಗಿದ್ದರು. ಅಗಸ್ಟ್ 15ರಂದು ಕೊನೆಗೊಂಡ ಪ್ರಥಮ ಹಂತದಲ್ಲಿ ಸುಮಾರು 14 ಲಕ್ಷಕ್ಕೂ ಅಧಿಕ ಸಸಿಗಳನ್ನು ನೆಡಲಾಗಿದ್ದು 5 ಲಕ್ಷಕ್ಕೂ ಅಧಿಕ ಬೀಜದುಂಡೆಗಳನ್ನು (ಸೀಡ್ ಬಾಲ್) ತಯಾರಿಸಲಾಯಿತು. ಸಸಿಗಳನ್ನು ನೇರವಾಗಿ ನೆಡುವುದು, ಬೀಜ ಬಿತ್ತನೆ, ಬೀಜದುಂಡೆಗಳನ್ನು ಬಂಜರು ಭೂಮಿಯಲ್ಲಿ ಎಸೆಯುವುದು ಹೀಗೆ 3 ವಿಧಾನಗಳಲ್ಲಿ ರಾಜ್ಯದಾದ್ಯಂತ ಎಲ್ಲಾ ತಾಲೂಕುಗಳಲ್ಲಿ ಈ ಅಭಿಯಾನ ಯಶಸ್ವಿಯಾಗಿ ಮೊದಲ ಹಂತ ಮುಗಿಸಿದೆ. ರಾಜ್ಯ ಸರ್ಕಾರ, ರೈಲ್ವೇ ಇಲಾಖೆ ಹಾಗೂ ಸಾಮಾನ್ಯ ನಾಗರಿಕರೂ ಈ ಅಭಿಯಾನಕ್ಕೆ ಸಂಪೂರ್ಣ ಸಹಕಾರ ನೀಡಿದ್ದು ಅಭಿಯಾನದ ಜನಪ್ರಿಯತೆ ಹೆಚ್ಚಲು ಕಾರಣ. ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಈ ಅಭಿಯಾನದ ಪ್ರಚಾರಕ್ಕೆ ಬಳಸಲಾಗಿತ್ತು.

*1ನೇ ಪುಟದಿಂದ*

## ಲವ್ ಜಿಹಾದ್: ಇನ್ನಷ್ಟು ಅಖಿಲೆಯರು ಹಾದಿಯಾ ಆಗದಿರಲಿ

- ಆಕೆಯನ್ನು ವಿದೇಶಕ್ಕೆ ಕರೆದುಕೊಂಡು ಹೋಗುವ ಸಾಧ್ಯತೆಯಿರುವುದರಿಂದ ಅದನ್ನು ತಡೆಯುವಂತೆ ಕೋರಿ ತಂದೆ ಅಶೋಕನ್ ಅವರು ಆರು ತಿಂಗಳ ಬಳಿಕ ಕೋರ್ಟಿಗೆ ಅರ್ಜಿ ಸಲ್ಲಿಸುತ್ತಾರೆ. ಈ ಮಧ್ಯೆ ಆಕೆಯನ್ನು ಸೈನಬಾಳ ಮನೆಯಿಂದ ಗೊತ್ತಿಲ್ಲದ ಇನ್ನೊಂದು ಸ್ಥಳದಲ್ಲಿಡಲಾಗುತ್ತದೆ.
- ಸತ್ಯಸಾರಿಣಿ ಮತ್ತು ಸೈನಬಾ ಅವರು ಅಕ್ರಮವಾಗಿ ಮತಾಂತರ ಮಾಡುತ್ತಿರುವ ಬಗ್ಗೆ ತನಿಖೆ ನಡೆಸುವಂತೆ ಕೋರ್ಟು ಪೊಲೀಸರಿಗೆ ಆದೇಶ ನೀಡುತ್ತದೆ.
- ಡಿಸೆಂಬರ್ 2016ರಲ್ಲಿ ಷಫಿನ್ ಜಹಾನ್ ಎಂಬ ವ್ಯಕ್ತಿಯೊಂದಿಗೆ ಕೋರ್ಟಿಗೆ ಬಂದ ಅಖಿಲಾ ಈತ ತನ್ನ ಗಂಡ ಎಂದು ಪರಿಚಯಿಸಿ, ವಿವಾಹ ಪ್ರಮಾಣ ಪತ್ರವನ್ನು ಕೋರ್ಟಿಗೆ ಸಲ್ಲಿಸುತ್ತಾಳೆ. ಆದರೆ, ಮದುವೆಯ ಪ್ರಮಾಣಪತ್ರ ನೀಡಿದ್ದ ತನ್ನೀರುಲ್ ಇಸ್ಲಾಂ ಸಂಘಂ ಎಂಬ ಸಂಸ್ಥೆ ಮದುವೆ ಪ್ರಮಾಣ ಪತ್ರ ಕೊಡುವ ಸಂಸ್ಥೆಯಾಗಿ ನೋಂದಣಿ ಆಗಿಲ್ಲವಾದ್ದರಿಂದ ಆ ಪ್ರಮಾಣ ಪತ್ರ ನಂಬಲರ್ಹವಲ್ಲ ಎಂಬುದನ್ನು ಕೋರ್ಟು ಗಮನಿಸುತ್ತದೆ.
- ಮೊದಲಿಗೆ ತನ್ನ ಹೊಸ ಹೆಸರು ಆಸಿಯಾ ಎಂದು ಹೇಳಿದ್ದ ಅಖಿಲಾ, ಬಳಿಕ ಸಲ್ಲಿಸಿದ ಅಫಿಡವಿಟ್‌ಗಳಲ್ಲಿ ಅಖಿಲಾ ಅಶೋಕನ್ ಅಲಿಯಾಸ್ ಆಧಿಯಾ ಎಂದು ನಮೂದಿಸಿದ್ದಳು. ಆದರೆ, ಕೋರ್ಟಿಗೆ ಸಲ್ಲಿಸಿದ ಅನುಮಾನಾಸ್ಪದ ವಿವಾಹ ಪ್ರಮಾಣಪತ್ರದಲ್ಲಿ ಹಾದಿಯಾ ಎಂದು ಆಕೆಯ ಹೆಸರು ನಮೂದಾಗಿತ್ತು.
- ಇವೆಲ್ಲವನ್ನು ಪರಿಗಣಿಸಿ, ಆಕೆಯನ್ನು ದೇಶದಿಂದ ಹೊರಗೆ ಸಾಗಿಸಲು ಮದುವೆ ಎಂಬುದು ಒಂದು ನಾಟಕ ಎಂದು ಅಭಿಪ್ರಾಯಪಟ್ಟ ಕೋರ್ಟು ಮದುವೆಯನ್ನು ರದ್ದುಗೊಳಿಸಿತು. ಆಕೆ ಓದನ್ನು ಮುಂದುವರಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರಿಂದ ಆಕೆಗೆ ಓದು ಮುಂದುವರಿಸಲು ಅನುಮತಿ ನೀಡಿ ಕಾಲೇಜಿನ ಮುಖ್ಯಸ್ಥರನ್ನೇ ಆಕೆಯ ಪಾಲಕರನ್ನಾಗಿ ನೇಮಿಸಿ ಆದೇಶ ಹೊರಡಿಸಿತು. ತನ್ನ ಗಂಡನನ್ನೇ ತನ್ನ ಪಾಲಕನನ್ನಾಗಿ ಪರಿಗಣಿಸುವಂತೆ ಅಖಿಲಾ ವಿನಂತಿಸಿದ್ದರೂ ಸುಪ್ರೀಂ ಕೋರ್ಟು ಅದನ್ನು ಪರಿಗಣಿಸದಿರುವುದು ಒಂದು ಒಳ್ಳೆಯ ಬೆಳವಣಿಗೆ.

ಷಫಿನ್ ಜಹಾನ್ ಮತ್ತು ಸಾಯಿನಾಬ ಇವರುಗಳಿಬ್ಬರೂ ಪಿಎಫ್‌ಐ ಕಾರ್ಯಕರ್ತರಾಗಿರುವುದು ಮತ್ತು ಷಫಿನ್ ಮೇಲೆ ಹಲವು ಕ್ರಿಮಿನಲ್ ಮೊಕದ್ದಮೆಗಳಿರುವುದು ಈ ಘಟನೆಯ ಹಿಂದೆ ಒಂದು ದೊಡ್ಡ ಹುನ್ನಾರ ಇರುವುದನ್ನು ಸ್ಪಷ್ಟಪಡಿಸುತ್ತವೆ. ಅಲ್ಲದೇ, ಷಫಿನ್ ಐಎಸ್‌ಐಎಸ್ ಜೊತೆಗೆ ಸಂಪರ್ಕ ಹೊಂದಿರುವ ವರದಿಗಳೂ ಬರುತ್ತಿವೆ. ಎನ್‌ಐಎ ನಡೆಸುತ್ತಿರುವ ತನಿಖೆಯಲ್ಲಿ ಇನ್ನಷ್ಟು ಅಂಶಗಳು ಹೊರಬರುವ ಸಾಧ್ಯತೆಗಳಿವೆ.

Date of Publication 10, December 2017

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17

FORTNIGHTLY 15-12-2017



# ಅಸ್ಪೃಶ್ಯತೆಮುಕ್ತ, ಸಮರಸ ಭಾರತ

## ಉಡುಪಿ ಧರ್ಮಸಂಸತ್ ನಿರ್ಣಯ




ಉಡುಪಿಯಲ್ಲಿ ಕಳೆದ ನವೆಂಬರ್‌ನಲ್ಲಿ ನಡೆದ ಹನ್ನೆರಡನೇ ಧರ್ಮ ಸಂಸತ್ ಮಹತ್ವದ ಹೆಜ್ಜೆಯಿಟ್ಟಿದ್ದು ಕೆಲವು ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಿದೆ:

- ಹಿಂದು ಧರ್ಮದಲ್ಲಿ ಆರಂಭದಲ್ಲಿ ಅಸ್ಪೃಶ್ಯತೆ ಇರಲಿಲ್ಲ. ಹತ್ತನೇ ಶತಮಾನದಲ್ಲಿ ಪೃಥ್ವಿರಾಜ್ ಮತ್ತು ಘೋರಿ ನಡುವಣ ಯುದ್ಧದ ಬಳಿಕ ಮುಸ್ಲಿಮರು ಹಿಂದು ಧರ್ಮದ ಮೇಲೆ ಅಸ್ಪೃಶ್ಯತೆ ಹೇರಿದರು. ಅಸ್ಪೃಶ್ಯತೆ ನಿವಾರಣೆಗಾಗಿ ದೇವಾಲಯಗಳಲ್ಲಿ ಹಿಂದು ಧರ್ಮದ ಎಲ್ಲರಿಗೂ ಪ್ರವೇಶ ನೀಡಬೇಕು. ಪ್ರತಿ ಹಿಂದೂಗಳ ಮನೆಗಳಲ್ಲಿ ಎಲ್ಲರಿಗೂ ಪ್ರವೇಶ ನೀಡಬೇಕು
- ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಶ್ರೇಷ್ಠ. ಶ್ರೇಷ್ಠತೆ ಮತ್ತು ಜ್ಯೇಷ್ಠತೆ ಜಾತಿಯಿಂದ ಬರುವುದಿಲ್ಲ, ಭಕ್ತಿಯಿಂದ ಬರುತ್ತದೆ.
- ಭಾರತದ ನೆಲದಲ್ಲಿ ಹುಟ್ಟಿದ ಧಾರ್ಮಿಕ ಮುಖಂಡರಿಂದ ಪ್ರವರ್ತಿತವಾದ ಎಲ್ಲ ಧರ್ಮಗಳೂ ಹಿಂದೂ ಧರ್ಮದ ಭಾಗವಾಗಿವೆ. ವಿದೇಶಗಳಿಂದ ಬಂದವು ಮಾತ್ರ ಹಿಂದುಯೇತರ ಧರ್ಮಗಳು.
- ಧಾರ್ಮಿಕ ವಿಧಿ ವಿಧಾನಗಳಲ್ಲಿ ಎಲ್ಲ ಜಾತಿಯ ಜನರಿಗೂ ಅವಕಾಶ ನೀಡಬೇಕು.
- ಸಂತರು, ಮಠಾಧೀಶರು, ಧಾರ್ಮಿಕ ನಾಯಕರು ಪರಿಶಿಷ್ಟ ಜಾತಿ ಜನರು ವಾಸಿಸುವ ಪ್ರದೇಶದಲ್ಲಿ ಸಂಚಾರ ಮಾಡಬೇಕು ಆ ಮೂಲಕ ಧರ್ಮ ಪ್ರಚಾರ ಮಾಡಬೇಕು.
- ಪ್ರಲೋಭನೆ, ಆಮಿಷಗಳಿಗೆ ಒಳಗಾಗಿ ಮತಾಂತರ ಹೊಂದಿರುವ ಹಿಂದುಗಳನ್ನು ಮರಳಿ ಕರೆತರುವ ಕಾರ್ಯ ನಡೆಯಬೇಕು.
- ದೇವಸ್ಥಾನಗಳ ಆಡಳಿತ ವ್ಯವಸ್ಥೆ ಸಮಾಜದ ಕೈಯಲ್ಲಿ ಇರಬೇಕು, ಸರ್ಕಾರದ ನಿಯಂತ್ರಣದಲ್ಲಲ್ಲ.
- ಗೋರಕ್ಷಣೆ ಪ್ರತಿಯೊಬ್ಬರ ಹೊಣೆ.

ವಿಶ್ವ ಹಿಂದೂ ಪರಿಷತ್ ಸಂಯೋಜನೆಯಲ್ಲಿ ನಡೆದ ಹನ್ನೆರಡನೇ ಧರ್ಮಸಂಸತ್‌ನಲ್ಲಿ ಪೇಜಾವರ ಸ್ವಾಮೀಜಿ, ಆದಿಚುಂಚನಗಿರಿ ಸ್ವಾಮೀಜಿ, ಸುತ್ತೂರು ಸ್ವಾಮೀಜಿ, ಸ್ವರ್ಣವಲ್ಲಿ ಸ್ವಾಮೀಜಿ ಸೇರಿದಂತೆ ಎರಡು ಸಾವಿರಕ್ಕೂ ಅಧಿಕ ಸಾಧು ಸಂತರು ಪಾಲ್ಗೊಂಡರು. ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್, ಧರ್ಮಸ್ಥಳ ಧರ್ಮಾಧಿಕಾರಿ ಡಾ ವೀರೇಂದ್ರ ಹೆಗ್ಗಡೆ ಸೇರಿದಂತೆ ಅನೇಕ ಮಹನೀಯರು ಭಾಗವಹಿಸಿದ್ದರು.

**ಎಲ್ಲಾ ತರದ ಬಾಧಕಗಳನ್ನು ದೂರಮಾಡಿ ಒಂದು ವರ್ಷದೊಳಗೆ ಶ್ರೀರಾಮ ಮಂದಿರದ ನಿರ್ಮಾಣ ಆರಂಭವಾಗುವುದು. ಉಡುಪಿಯಲ್ಲಿ ನಡೆದ ಯಾವುದೇ ಧರ್ಮಸಂಸತ್ತಿನಲ್ಲಿ ಮಾಡಲಾದ ಸಂಕಲ್ಪಗಳೂ ಯಾವತ್ತೂ ಪೂರ್ತಿಯಾಗಿವೆ. 1969ರಲ್ಲಿ ಅಸ್ಪೃಶ್ಯತೆ ನಿವಾರಣೆಯ ಸಂಕಲ್ಪ ಮಾಡಲಾಗಿತ್ತು. 1985ರ ಧರ್ಮಸಂಸತ್‌ನಲ್ಲಿ ಶ್ರೀರಾಮ ಜನ್ಮಭೂಮಿಯ ಬೀಗ ತೆಗೆಯುವ ಸಂಕಲ್ಪ ಮಾಡಲಾಗಿತ್ತು. ಈ ಎರಡೂ ಸಂಕಲ್ಪಗಳು ಸಾಕಾರವಾಗಿರುವಂತೆ ಈ ಮೂರನೆಯ ಸಂಕಲ್ಪವೂ ಸಾಕಾರಗೊಳ್ಳಲಿದೆ.**

– **ಪೂಜ್ಯ ವಿಶ್ವೇಶತೀರ್ಥ ಸ್ವಾಮೀಜಿ,** ಪೇಜಾವರ ಮಠ, ಉಡುಪಿ

**ಹಿಂದೂ ಸಮಾಜ ವಿಜಯದ ಕಡೆ ಪ್ರಸ್ಥಾನ ಮಾಡುತ್ತಿದೆ. ಅದರ ವಿಜಯ ನಿಶ್ಚಿತ. ವಿಶ್ವದಲ್ಲಿ ಹಿಂದುವಿನ ಗೌರವ ಹೆಚ್ಚುತ್ತಿದೆ. ಸಮರಸತೆಯ ವ್ಯವಹಾರ ಈ ನಿಟ್ಟಿನಲ್ಲಿ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಮಂದಿರ, ನೀರು ಮತ್ತು ಸ್ಮಶಾನ ಇವುಗಳಲ್ಲಿ ಎಲ್ಲರಿಗೂ ಸಮಾನತೆಯಿರಬೇಕು.**

– **ಡಾ ಮೋಹನ ಭಾಗವತ್,** ಆರೆಸ್ಸೆಸ್ ಸರಸಂಘಚಾಲಕರು

# ಸೇವಾಸಂಗಮದಲ್ಲಿ ಸೇವೆಯ ವಿವಿಧ ಮುಖಗಳ ಅನಾವರಣ

ದೇಶದಾದ್ಯಂತ ಸಾವಿರಾರು ವಿವಿಧ ರೀತಿಯ ಸೇವಾಚಟುವಟಿಕೆಗಳಲ್ಲಿ ತೊಡಗಿರುವ ಸಂಘಟನೆ ರಾಷ್ಟ್ರೀಯ ಸೇವಾಭಾರತಿಯ ಆಶ್ರಯದಲ್ಲಿ ಹುಬ್ಬಳ್ಳಿಯಲ್ಲಿ ಕಳೆದ ಡಿ. 1 ರಿಂದ 3ರ ವರೆಗೆ ಕರ್ನಾಟಕ ರಾಜ್ಯ ಅನೇಕ ಸೇವಾ ಸಂಘಟನೆಗಳು ವ್ಯಕ್ತಿಗಳನ್ನು ಒಂದೆಡೆ ಸೇರಿಸುವ ಸಮಾವೇಶ ಸೇವಾ ಸಂಗಮ ಜರುಗಿತು. ಕಾರ್ಯಕ್ರಮವನ್ನು ಪುದುಚ್ಚೇರಿಯ ಲೆಫ್ಟಿನೆಂಟ್ ಗವರ್ನರ್ ಡಾ. ಕಿರಣ್ ಬೇಡಿ ಉದ್ಘಾಟಿಸಿದರು, ಆರೆಸ್ಸೆಸ್ ಸರಕಾರ್ಯವಾಹ ಸುರೇಶ್ (ಭಯ್ಯಾಜಿ) ಜೋಷಿ ಸೇರಿದಂತೆ ಅನೇಕ ಹಿರಿಯರು, ವಿವಿಧ ಸೇವಾಸಂಘಟನೆಗಳ ಪ್ರಮುಖರು, ಪ್ರತಿನಿಧಿಗಳು ಪಾಲ್ಗೊಂಡರು. ಮೂರು ದಿನ ನಡೆದ ಈ ಸಮಾವೇಶದ ಅಂಗವಾಗಿ ಮಹಿಳಾ ಸಮಾವೇಶ, ಯುವ ಸಮಾವೇಶ ಹಾಗೆಯೇ ಕೃಷಿ, ಪರಿಸರ, ಆರೋಗ್ಯ, ಸಾಮರಸ್ಯ, ಸಂಸ್ಕಾರ ಮೊದಲಾದ ವಿವಿಧ ವಿಷಯಗಳ ಮೇಲಿನ ಗೋಷ್ಠಿಗಳು ನಡೆದವು. ಸೇವಾ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಸಮಾನ ಮನಸ್ಕ ಸೇವಾ ಸಂಸ್ಥೆಗಳನ್ನು ಒಂದೇ ಸೂರಿನಡಿ ತರುವ ಪ್ರಯತ್ನವೇ ಸೇವಾ ಸಂಗಮ.

ಕಾರ್ಯಕ್ರಮದ ಎರಡನೆಯ ದಿನದಂದು ಆರೆಸ್ಸೆಸ್ ಸರಕಾರ್ಯವಾಹ ಸುರೇಶ್ ಭಯ್ಯಾಜಿ ಜೋಷಿಯವರು ಆರೆಸ್ಸೆಸ್ ಸೇವಾ ವಿಭಾಗದ ಮೊಬೈಲ್ ಆ್ಯಪ್ 'ಸೇವಾಗಾಥಾ'ವನ್ನು ಬಿಡುಗಡೆಗೊಳಿಸಿದರು.


ಸೇವಾಸಂಗಮದಲ್ಲಿ ವಿವಿಧ ರೀತಿಯ ಸೇವಾಚಟುವಟಿಕೆಗಳಲ್ಲಿ ತೊಡಗಿಕೊಂಡ ಸಂಘಸಂಸ್ಥೆ ಹಾಗೂ ಪ್ರಾಜೆಕ್ಟ್‌ಗಳ ಮಾಹಿತಿ ನೀಡುವ ಮಳಿಗೆಗಳು, ಸಾಹಿತ್ಯ, ಸಂಸ್ಕೃತಿ, ವೀಡಿಯೋ ಸೇರಿದಂತೆ ವಿವಿಧ 100ಕ್ಕೂ ಹೆಚ್ಚು ಮಳಿಗೆಗಳು ಪ್ರದರ್ಶನಗೊಂಡವು.






**ದೇಶದಲ್ಲಿ ಸರ್ಕಾರಿ ಯೋಜನೆಗಳಿಗೆ ಬರವಿಲ್ಲ. ಸ್ವಯಂಸೇವಕರು ಹಾಗೂ ಸರ್ಕಾರೇತರ ಸಂಘಟನೆಗಳೂ ಸಾಕಷ್ಟು ಇವೆ. ಆದರೆ, ಅರ್ಹರು ಮತ್ತು ಸೇವೆ ಒದಗಿಸುವವರ ಮಧ್ಯೆ ಅಂತರವಿದೆ. ಇದನ್ನು ಹೋಗಲಾಡಿಸಲು ಸ್ವಯಂ ಸೇವಕರಿಂದ ಹೊಸ ಆಂದೋಲನವೊಂದು ಆರಂಭವಾಗಬೇಕು. ಸೇವೆ ಎನ್ನುವುದು ಕಟ್ಟ ಕಡೆಯ ವ್ಯಕ್ತಿಗೂ ತಲುಪಬೇಕು. ಅದಕ್ಕೆ ಪೂರಕವಾಗಿ ಬೇರೆ ಬೇರೆ ಕಡೆಯಲ್ಲಿ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿರುವವರು ಒಂದು ಮಾಲೆಯ ರೀತಿಯಲ್ಲಿ ಆಂದೋಲನದಲ್ಲಿ ಜೊತೆಯಾಗಬೇಕು. ಆಗ ಸಮಾಜ ಕಾರ್ಯ ಮಾಡುವವರ ಶಕ್ತಿ ಹೆಚ್ಚುತ್ತದೆ. ಪರಸ್ಪರ ಮಾಹಿತಿ ಹಂಚಿಕೆಗೂ ಅನುಕೂಲ.**

– **ಡಾ ಕಿರಣ್ ಬೇಡಿ,** ಪುದುಚ್ಚೇರಿಯ ಲೆಫ್ಟಿನೆಂಟ್ ಗವರ್ನರ್, ಸೇವಾ ಸಂಗಮ ಉದ್ಘಾಟಿಸಿ ಮಾತನಾಡುತ್ತ.



**ಸುಸಂಸ್ಕೃತ ಹಾಗೂ ಸಚ್ಚಾರಿತ್ರ್ಯ ಉಳ್ಳ ಯುವಕರು ರಾಷ್ಟ್ರಕ್ಕೆ ಬೇಕು. ಅಷ್ಟೇ ಅಲ್ಲ ಅವರು ಸಂವೇದನಶೀಲ ಅಂತಃಕರಣ ಉಳ್ಳವರೂ ಆಗಿರಬೇಕು. ಅವರು ಭಾವನೆಗಳ(Emotion) ಇರುವ ಜೊತೆಗೆ ಸಮಾಜದ ವಿಷಯಗಳ ಕಡೆ ತೆರೆದುಕೊಂಡವರು(Exposure) ಆಗಿರಬೇಕು. ಸಮಾಜಮುಖಿ ಸಂವೇದನೆ ಹಾಗೂ ವಿಷಯಗಳನ್ನು ತಿಳಿದುಕೊಂಡು ಪ್ರಯೋಗ(Experiment) ಮಾಡಬಲ್ಲವರು ನಾವಾಗಬೇಕು. ಹಿಂದುಳಿದವರು ಅಸಹಾಯಕರಿಗೆ ಸಹಾಯಹಸ್ತ ನೀಡಬಲ್ಲ, ಹೃದಯದೊಂದಿಗೆ ಬುದ್ಧಿಯಿಂದಲೂ ಕೆಲಸಮಾಡಬಲ್ಲ, ಸುದೃಢ ಆರೋಗ್ಯವಂತರು ರಾಷ್ಟ್ರಕ್ಕೆ ಬೇಕು. ಅಂತವರು ಯುವಕರಲ್ಲದೇ ಬೇರೆ ಯಾರಿರಲು ಸಾಧ್ಯ?.**

– **ಸುರೇಶ್ (ಭಯ್ಯಾಜಿ) ಜೋಷಿ,** ಆರೆಸ್ಸೆಸ್ ಸರಕಾರ್ಯವಾಹರು, ಯುವ ಸಮಾವೇಶ ಉದ್ಘಾಟಿಸಿ ಮಾತನಾಡುತ್ತ

# ಬೆಂಗಳೂರಿನ ಮಕ್ಕಳ ಹಿತರಕ್ಷಣಾ ಕಾರ್ಯಕರ್ತ ಗೋಪಿನಾಥ್‌ಗೆ ಯಶವಂತರಾವ್ ಕೇಳ್ಕರ್ ಯುವ ಪುರಸ್ಕಾರ




ವಿಶ್ವದ ದೊಡ್ಡ ವಿದ್ಯಾರ್ಥಿ ಸಂಘಟನೆ ಎನ್ನುವ ಹೆಗ್ಗಳಿಕೆ ಪಡೆದಿರುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಭೂಮಿಕೆ ವಹಿಸಿದ ಪ್ರೊ. ಯಶವಂತರಾವ್ ಕೇಳ್ಕರ್ ಅವರ ಸ್ಮೃತಿಯಲ್ಲಿ ನೀಡಲಾಗುವ ಪ್ರೊ. ಯಶವಂತರಾವ್ ಕೇಳ್ಕರ್ ಯುವ ಪುರಸ್ಕಾರವನ್ನು ಈ ವರ್ಷ ಮಕ್ಕಳ ಹಿತರಕ್ಷಣೆ ಮತ್ತು ಬೆಳವಣಿಗೆಗಾಗಿ ಶ್ರಮಿಸುತ್ತಿರುವ ಕಾರ್ಯಕ್ಕಾಗಿ ಬೆಂಗಳೂರು ಮೂಲದ ಆರ್. ಗೋಪಿನಾಥ್ ಅವರಿಗೆ ನೀಡಲಾಗಿದೆ. ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ಎಬಿವಿಪಿ ಮತ್ತು ವಿದ್ಯಾರ್ಥಿ ನಿಧಿ ಟ್ರಸ್ಟ್ 1991ರಿಂದ ಈ ಪುರಸ್ಕಾರವನ್ನು ನೀಡುತ್ತ ಬಂದಿದೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ ಸೋಷಿಯಲ್ ವರ್ಕ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಗೋಪಿನಾಥ್ ಗ್ರಾಮೀಣ ಹಿನ್ನೆಲೆಯುಳ್ಳವರಾಗಿದ್ದು ಬಾಲ್ಯದಲ್ಲಿ ಸ್ವತಃ ಬಾಲಕಾರ್ಮಿಕ ಮತ್ತು ಜೀತಪದ್ಧತಿಗಳಂತ ಸಂಕಷ್ಟಗಳನ್ನು ಅನುಭವಿಸಿದ್ದರು. ತಮ್ಮ ಬಾಲ್ಯಕಾಲದ ಹೋರಾಟ ಮತ್ತು ಅನುಭವಗಳು ಅವರು ಮಕ್ಕಳ ಸಬಲೀಕರಣ ಮತ್ತು ಸರ್ವಾಂಗೀಣ ಬೆಳವಣಿಗೆಗಾಗಿ ಕೆಲಸ ಮಾಡುವ ಸಲುವಾಗಿ ಸ್ಪರ್ಶ ಟ್ರಸ್ಟ್ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಲು ಪ್ರೇರಣೆ ನೀಡಿದವು. ಅವರ ವೈಯಕ್ತಿಕ ಪ್ರಯತ್ನ ಹಾಗೂ ಸ್ಪರ್ಶ ಟ್ರಸ್ಟ್‌ನ ಸಹಯೋಗದಿಂದ ಬೆಂಗಳೂರಿನ ಸುತ್ತ ಒಟ್ಟು ಎಂಟು ಕೇಂದ್ರಗಳಲ್ಲಿ 400 ಮಕ್ಕಳಿಗೆ ಆಶ್ರಯ ದೊರಕಿದೆ. ಇದುವರೆಗೆ ಸ್ಪರ್ಶ ಟ್ರಸ್ಟ್ ಸಹಾಯ, ರಕ್ಷಣೆ ಅಗತ್ಯವಿರುವ ಸುಮಾರು 2500 ಮಕ್ಕಳನ್ನು ತಲುಪಿದೆ, 40ಕ್ಕೂ ಹೆಚ್ಚು ಸಾಮಾಜಿಕ ಕಾರ್ಯಕರ್ತರು ಗೋಪಿನಾಥರೊಡನೆ ಕೈಜೋಡಿಸಿದ್ದಾರೆ.

ಇತ್ತೀಚೆಗೆ ಝಾರ್ಖಂಡ್ ರಾಜ್ಯದ ರಾಂಚಿಯಲ್ಲಿ ನಡೆದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ 63ನೇ ರಾಷ್ಟ್ರೀಯ ಅಧಿವೇಶನದಲ್ಲಿ ಗೋಪಿನಾಥ್‌ರವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಝಾರ್ಖಂಡ್ ರಾಜ್ಯದ ಮುಖ್ಯಮಂತ್ರಿ ರಘುಬರ್ ದಾಸ್, ಖ್ಯಾತ ಕ್ರಿಕೆಟ್ ಪಟು ಸುರೇಶ್ ರೈನಾ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಸುರೇಶ ರೈನಾ "ದೇಶದ ಬಗ್ಗೆ ಎಬಿವಿಪಿ ಕಾರ್ಯಕರ್ತರಲ್ಲಿ ಉತ್ಸಾಹ, ಹುಮ್ಮಸ್ಸು ಕಾಣುತ್ತದೆ, ಇದೇ ತರಹದ ಹುಮ್ಮಸ್ಸು ನನಗೆ ದೇಶಕ್ಕಾಗಿ ಕ್ರಿಕೆಟ್ ಆಡುವಾಗ ಅನುಭವಕ್ಕೆ ಬರುತ್ತದೆ" ಎಂದು ಹೇಳಿದರು.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.